# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಡಿಸೆಂಬರ್ 05, 2020

ಸಂಪುಟ : 47 ಸಂಚಿಕೆ : 215 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com




# ಭೂತಕನ್ನಡಿ ಹಿಡಿದು ಕಾಂಗ್ರೆಸ್ ಹುಡುಕಬೇಕಿದೆ

## ಶೇ.80 ಪಂಚಾಯ್ತಿಗಳಲ್ಲಿ ಬಿಜೆಪಿಗೆ ಜಯ: ಗ್ರಾಮ ಸ್ವರಾಜ್ಯ ಸಮಾವೇಶದಲ್ಲಿ ಸಚಿವ ಈಶ್ವರಪ್ಪ

ದಾವಣಗೆರೆ, ಡಿ. 4 – ರಾಜ್ಯದಲ್ಲಿ ಈಗ ಕಾಂಗ್ರೆಸ್ ಇಲ್ಲ, ಜೆಡಿಎಸ್ ಎಲ್ಲಿದೆ ಎಂದು ಹುಡುಕಬೇಕಿದೆ. ಈಗಷ್ಟೇ ಅಲ್ಲದೇ ಮುಂದಿನ 20-30 ವರ್ಷಗಳವರೆಗೆ ಬಿಜೆಪಿಯೇ ಇರಲಿದೆ ಎಂದಿರುವ ಬಿಜೆಪಿ ನಾಯಕ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ, ಕಾಂಗ್ರೆಸ್ ಬದುಕಿದೆ ಎಂದು ತೋರಿಸಲು ಅದರ ನಾಯಕರು ಪ್ರಯತ್ನ ಪಡುತ್ತಿದ್ದಾರೆ ಎಂದು ಲೇವಡಿ ಮಾಡಿದ್ದಾರೆ.

ಗ್ರಾಮ ಪಂಚಾಯ್ತಿ ಚುನಾವಣೆಗಳ ಹಿನ್ನೆಲೆಯಲ್ಲಿ ನಗರದ ಜಿಎಂಐಟಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಬಿಜೆಪಿಯ ಗ್ರಾಮ ಸ್ವರಾಜ್ಯ ಸಮಾವೇಶದ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದ ಅವರು, ಜಿಲ್ಲೆಯ 192 ಗ್ರಾಮ ಪಂಚಾಯ್ತಿಗಳಲ್ಲಿ ಶೇ.80ರಲ್ಲಿ ಗೆಲ್ಲಲು ಬಿಜೆಪಿಗೆ ಅವಕಾಶ ಇದೆ. ಈ ಗೆಲುವು ವಿಧಾನಸಭಾ ಚುನಾವಣೆಗೆ ಬುನಾದಿಯೂ ಆಗಲಿದೆ ಎಂದಿದ್ದಾರೆ.

ದೇಶದೆಲ್ಲೆಡೆ ಕಾಂಗ್ರೆಸ್ ಪಕ್ಷ ಲೆಕ್ಕವೇ ಇಲ್ಲದಂತಾಗಿದೆ. ಕಾಂಗ್ರೆಸ್ ಎಲ್ಲಿದೆ ಎಂದು ಭೂತಕನ್ನಡಿ ಹಿಡಿದು ಹುಡುಕಬೇಕಿದೆ. ಆದರೆ, ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ (3ನೇ ಪುಟಕ್ಕೆ)

### ಸಿದ್ದರಾಮಯ್ಯಗೆ ಬುದ್ಧಿ ಬರುತ್ತಾ ?... ಬರಲ್ಲ.. !

ಲವ್ ಜಿಹಾದ್ ತಡೆಯಲು ಕಾನೂನು ರೂಪಿಸುವುದನ್ನು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ವಿರೋಧಿಸುತ್ತಿದ್ದಾರೆ. ಇಂತಹ ವಿರೋಧದ ಕಾರಣದಿಂದಾಗಿಯೇ ದೇಶದ ಹಲವು ರಾಜ್ಯಗಳಲ್ಲಿ ಕಾಂಗ್ರೆಸ್ 2-3 ಸ್ಥಾನಗಳಿಗೆ ಬಂದಿದೆ. ಇಲ್ಲೂ ಹಾಗಾದರೆ ಅವರಿಗೆ ಬುದ್ಧಿ ಬರಬಹುದೇನೋ ಎಂದು ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದ್ದಾರೆ.

ಆಗ ಸಭಿಕರೊಬ್ಬರು ಹಾಗಾದರೂ ಬುದ್ಧಿ ಬರಲ್ಲ ಎಂದರು. 'ದಾವಣಗೆರೆ ಜನ ಸತ್ಯ ಹೇಳ್ತಾರೆ' ಎಂದು ಮುಂದುವರೆದ ಈಶ್ವರಪ್ಪ, ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಕೇವಲ ಒಂದು ಸ್ಥಾನ ದೊರೆಯಿತು. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಸೋತರು. ಆದರೂ ಬುದ್ಧಿ ಬರಲಿಲ್ಲ ಎಂದರು.

### ಡಿಸಿಸಿ ಬ್ಯಾಂಕ್ 4 ನಿರ್ದೇಶಕರು, ಎನ್.ಜಿ. ಪುಟ್ಟಸ್ವಾಮಿ ಬಿಜೆಪಿಗೆ



ದಾವಣಗೆರೆ ಜಿಲ್ಲಾ ಸಹಕಾರಿ ಬ್ಯಾಂಕ್‌ನ ನಿರ್ದೇಶಕರಾದ ಕೆಂಗಲಹಳ್ಳಿ ಷಣ್ಮುಖಪ್ಪ, ವೇಣುಗೋಪಾಲ್, ಬಣಕಾರ್ ಜಗದೀಶಪ್ಪ, ದ್ಯಾಮನ ಹಳ್ಳಿ ಬಿ. ಶೇಖರಪ್ಪ, ಹಿರಿಯ ಮುಖಂಡರಾದ ಎನ್.ಜಿ. ಪುಟ್ಟಸ್ವಾಮಿ, ಹನುಮನ ಹಳ್ಳಿ ವಿಶ್ವನಾಥ್, ಎನ್.ಜಿ. ನವೀನ್, ರಾಜಶೇಖರ್ ಮತ್ತಿತರರು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಸಚಿವ ಕೆ.ಎಸ್. ಈಶ್ವರಪ್ಪ ಅವರು ಬಿಜೆಪಿ ಶಾಲು ಹೊದಿಸುವ ಮೂಲಕ ಇವರನ್ನು ಪಕ್ಷಕ್ಕೆ ಆಹ್ವಾನಿಸಿಕೊಂಡಿದ್ದಾರೆ.

### ಪಕ್ಕದ ಮನೆಯವರ ವೋಟು ಸಿಗುವುದಿದ್ದರೆ ಚುನಾವಣೆಗೆ ನಿಲ್ಲಿ

ಪಕ್ಕದ ಮನೆಯವರ ಮತ ಸಿಗುವ ಗ್ಯಾರಂಟಿ ಇದ್ದರೆ ಮಾತ್ರ ಗ್ರಾಮ ಪಂಚಾಯ್ತಿ ಚುನಾವಣೆಗೆ ನಿಲ್ಲಿ! ಇದು ಶಾಸಕ ಎಸ್.ಎ. ರವೀಂದ್ರನಾಥ್, ಟಿಕೆಟ್ ಆಕಾಂಕ್ಷಿಗಳಿಗೆ ನೀಡಿದ ಸಲಹೆ. ಪಕ್ಷದಿಂದ ಟಿಕೆಟ್ ಬೇಕು ಎಂದು ಕೇಳುವುದಕ್ಕೆ ಮುಂಚೆ ಮತದಾರರ ಜೊತೆ ಮಾತನಾಡಿ. ಆಗ ಪರಿಸ್ಥಿತಿ ಏನಿದೆ ಎಂಬುದು ತಿಳಿಯುತ್ತದೆ. ಗ್ರಾ.ಪಂ. ಸ್ಥಾನಗಳನ್ನು ತ್ಯಾಗ ಮಾಡಿದರೆ ಮುಂದೆ ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಹಾಗೂ ಸಂಘಗಳಲ್ಲಿ ಅವಕಾಶ ಇದೆ. ಅದು ಬಿಟ್ಟು ಬಿಸಿ ಬಿಸಿದು ಬೇಕು ಎಂದು ನುಂಗಲು ಹೋದರೆ ಗಂಟಲು ಸುಟ್ಟುಕೊಳ್ಳುತ್ತೀರಿ ಎಂದು ರವೀಂದ್ರನಾಥ್ ಎಚ್ಚರಿಕೆ ನೀಡಿದರು.

# ಮರಾಠ ನಿಗಮ ವಿರೋಧಿಸಿ ಇಂದು ರಾಜ್ಯ ಬಂದ್‌ಗೆ ಕರೆ

## ಸರ್ಕಾರದ ವಿರೋಧ, ಬ್ಯಾಂಕ್, ಕಚೇರಿಗಳ ಸೇವೆ ಎಂದಿನಂತೆ

ಬೆಂಗಳೂರು, ಡಿ. 4 - ಮರಾಠ ಅಭಿವೃದ್ಧಿ ನಿಗಮ ಸ್ಥಾಪನೆ ವಿರೋಧಿಸಿ, ಕನ್ನಡಪರ ಸಂಘಟನೆಗಳ ಒಕ್ಕೂಟ ನಾಳೆ ಶನಿವಾರ ಕರೆ ನೀಡಿರುವ ಬಂದ್‌ಗೆ ರಾಜ್ಯ ಸರ್ಕಾರ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಸರ್ಕಾರಿ ಕಚೇರಿ, ಬ್ಯಾಂಕ್, ಆರೋಗ್ಯ ಸೇವೆ ಸೇರಿದಂತೆ ಎಲ್ಲಾ ರೀತಿಯ ಸೇವೆಗಳು ಎಂದಿನಂತೆ ಕಾರ್ಯನಿರ್ವಹಿಸಲಿವೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ಹಾಗೂ ಮೆಟ್ರೋ ಸೇವೆ ಎಂದಿನಂತೆ ಕಾರ್ಯನಿರ್ವಹಿಸಲಿವೆ. ಬಂದ್‌ಗೆ ಆಟೋ ಮತ್ತು ಟ್ಯಾಕ್ಸಿ ಚಾಲಕರು ಬೆಂಬಲ ವ್ಯಕ್ತಪಡಿಸಿದ್ದಾರೆ.

ಸಾರಿಗೆ ಬಸ್‌ಗಳು ರಸ್ತೆಗಿಳಿಯುವು ದರಿಂದ ಬಂದ್ ಸಾಂಕೇತಿಕ ಪ್ರತಿ ಭಟನೆಗೆ ಸೀಮಿತವಾಗಿ ಜನಜೀವನದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಕಡಿಮೆ. ಈ ಮಧ್ಯೆ ಮುಖ್ಯಮಂತ್ರಿ ಯಡಿಯೂರಪ್ಪ ಮಾತನಾಡಿ, ಬಂದ್ ಮಾಡದಂತೆ ಕನ್ನಡಪರ ಸಂಘಟನೆಗಳಿಗೆ ಮನವಿ ಮಾಡಿದ್ದಾರೆ.

ಬಂದ್ ಮಾಡಿ, ಜನರಿಗೆ ತೊಂದರೆ ಕೊಡಬೇಡಿ, ಕನ್ನಡಕ್ಕೆ ಏನು ಆದ್ಯತೆ ನೀಡಬೇಕು, ಅದನ್ನು ನೀಡು ತ್ತೇನೆ. ಇನ್ನಷ್ಟು ಅಭಿವೃದ್ಧಿಪಡಿಸಲು ಸಲಹೆ ಸೂಚನೆಗಳನ್ನು ನೀಡಿದಲ್ಲಿ, ಅದನ್ನು ಕಾರ್ಯರೂಪಕ್ಕೆ ತರುವುದಾಗಿ ಹೇಳಿದ್ದಾರೆ. ಬಲವಂತದ ಬಂದ್‌ಗೆ ಅವಕಾಶವಿಲ್ಲ. ಎಂದಿನಂತೆ ಜನಜೀವನ ಸಾಗುತ್ತದೆ. ಎಲ್ಲಾ ಸಮಾಜಗಳನ್ನು ಒಗ್ಗಟ್ಟಾಗಿ ತೆಗೆದುಕೊಂಡು ಹೋಗು ವುದು ಸರ್ಕಾರದ ಕರ್ತವ್ಯ (3ನೇ ಪುಟಕ್ಕೆ)

### ಬ್ಯಾಂಕುಗಳ ಡಿವಿಡೆಂಡ್‌ಗೆ ಆರ್.ಬಿ.ಐ. ತಡೆ

ಮುಂಬೈ, ಡಿ. 4 – ಕೊರೊನಾದಿಂದ ಉಂಟಾಗಿರುವ ಆರ್ಥಿಕ ಆಘಾತದ ಹಿನ್ನೆಲೆಯಲ್ಲಿ ಶೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳು ಹಾಗೂ ಸರಕಾರಿ ಬ್ಯಾಂಕುಗಳು ಮಾರ್ಚ್ 2020ಕ್ಕೆ ಅಂತ್ಯವಾದ ಹಣಕಾಸು (2ನೇ ಪುಟಕ್ಕೆ)






### ರೈತರ ಫಸಲುಗಳ ಪರಿವರ್ತನ ಸಹಕಾರ ಸಂಘಕ್ಕೆ ಗೌಡರು ಅಧ್ಯಕ್ಷ



ದಾವಣಗೆರೆ, ಡಿ.4- ನಗರದ ರೈತರ ಫಸಲುಗಳ ಪರಿವರ್ತನ ಮತ್ತು ವ್ಯಾಪಾರೋ ದ್ಯಮ ಸಹಕಾರ ಸಂಘದ ಅಧ್ಯಕ್ಷರಾಗಿ ಜಿ.ಎಸ್. ಪರಮೇಶ್ವರ ಗೌಡರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಅಧ್ಯಕ್ಷರಾಗಿದ್ದ ಶಾಮನೂರು ಕಲ್ಲೇಶಪ್ಪ ಅವರ ನಿಧನದಿಂದಾಗಿ ತೆರವಾದ ಸ್ಥಾನಕ್ಕೆ ಸಂಘದ ಕಚೇರಿ ಸಭಾಂಗಣದಲ್ಲಿ ಇಂದು ನಡೆದ ಸಂಘದ ಆಡಳಿತ ಮಂಡಳಿ ಸಭೆಯಲ್ಲಿ ಈ ಆಯ್ಕೆ ನಡೆಯಿತು.

ಸಂಘದ ಉಪಾಧ್ಯಕ್ಷ ಬಿ.ಆರ್. ಸೋಮೇಶೇಖರಪ್ಪ, ನಿರ್ದೇಶಕರುಗಳಾದ ಜಿ.ಸೋಮಶೇಖರಪ್ಪ, ಬಿ.ಜಿ.ನಾಗರಾಜ್, ಕೆ.ಜಿ.ವಾಮದೇವಪ್ಪ, ಎನ್.ಉಮಾಪತಿ, ಎಸ್. ನಂಜಪ್ಪ, ಟಿ.ಹೆಚ್.ಶಂಕರಪ್ಪ, ಬಿ. ನಾಗೇಂದ್ರಪ್ಪ, (2ನೇ ಪುಟಕ್ಕೆ)

### ಡಿ.8ರಂದು ಭಾರತ್ ಬಂದ್

#### ಪ್ರತಿಭಟನಾ ನಿರತ ದೆಹಲಿ ರೈತರಿಂದ ಕರೆ

ನವದೆಹಲಿ, ಡಿ. 4 - ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳ ವಿರುದ್ಧದ ಹೋರಾಟ ತೀವ್ರಗೊಳಿಸಿರುವ ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರು, ಡಿಸೆಂಬರ್ 8ರ ಮಂಗಳವಾರ ಭಾರತ್ ಬಂದ್‌ಗೆ ಕರೆ ನೀಡಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ರೈತ ನಾಯಕ ಗುರ್ನಾಮ್ ಸಿಂಗ್ ಚಡೋನಿ, ಕಾಯ್ದೆಗಳನ್ನು ವಾಪಸ್ ಪಡೆಯುವ ತಮ್ಮ ಬೇಡಿಕೆಯನ್ನು ಕೇಂದ್ರ ಸರ್ಕಾರ ಶನಿವಾರದೊಳಗೆ ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು (2ನೇ ಪುಟಕ್ಕೆ)


ಶುದ್ಧ ಚಿನ್ನ. ಸುಂದರ ವಿನ್ಯಾಸಗಳು. ನ್ಯಾಯಸಮ್ಮತವಾದ ತಯಾರಿಕಾ ಶುಲ್ಕ. ಇದು ನ್ಯಾಯಯುತ ಬೆಲೆಯ ಭರವಸೆ.



MALABAR FAIR PRICE PROMISE

ಪ್ರತಿದಿನದ ಆಭರಣಗಳ ಮೇಲೆ ಅತ್ಯಂತ ಕಡಿಮೆ ತಯಾರಿಕಾ ಶುಲ್ಕ, ಕರಕುಶಲತೆಗೆ ಅನುಗುಣವಾಗಿ ವಿನ್ಯಾಸಕರ ಆಭರಣಗಳಿಗೆ ಉತ್ತಮವಾದ ತಯಾರಿಕಾ ಶುಲ್ಕಗಳು. ಇದು ಮಲಬಾರ್ ಗೋಲ್ಡ್ & ಡೈಮಂಡ್ಸ್‌ನಿಂದ ನಿಮಗಾಗಿ ನ್ಯಾಯಯುತ ಬೆಲೆಯ ಭರವಸೆ. ಭಾರತದಾದ್ಯಂತ ಒಂದು ಅತ್ಯುತ್ತಮ ಚಿನ್ನದ ಬೆಲೆ ಎಂಬ ಶ್ಲಾಘನೆಗೆ ಪಾತ್ರವಾಗಿದೆ ಮತ್ತು ಮೌಲ್ಯವರ್ಧಿತ ಸೇವೆಗಳನ್ನು ಮಲಬಾರ್‌ನಿಂದ ಖಾತರಿಪಡಿಸುತ್ತೇವೆ. ನಿಮ್ಮ ಹಣಕ್ಕಾಗಿ ಸಂಪೂರ್ಣ ಮೌಲ್ಯವನ್ನು ಖಾತರಿಪಡಿಸುತ್ತದೆ. ಆದ್ದರಿಂದ ನೀವು ದರ ಸಂಧಾನ ಮಾಡುವ ಅಗತ್ಯವಿಲ್ಲ.

ಮಲಬಾರ್ 10 ಭರವಸೆಗಳನ್ನು ನೀಡುತ್ತಿದೆ | ONE INDIA ONE GOLD RATE | ತಯಾರಿಕಾ ಶುಲ್ಕ 4.9% ರಿಂದ




ಮದುವೆಯ ಖರೀದಿಗಳಿಗಾಗಿ ವಿಶೇಷ ಸೌಲಭ್ಯಗಳು

ಮುಂಗಡವಾಗಿ 10% ರಿಂದ ಪಾವತಿಸುವ ಮೂಲಕ ಆಭರಣಗಳನ್ನು ಕಾಯ್ದಿರಿಸಿ ಮತ್ತು ಚಿನ್ನದ ದರದಲ್ಲಾಗುವ ಏರಿಳಿತದಿಂದ ಸಂರಕ್ಷಿಸಲ್ಪಡಿ.

ನಿಮ್ಮ ಆಕರ್ಷಕ ಸಂಗ್ರಹವನ್ನು ಬ್ರೌಸ್ ಮಾಡಲು ಮತ್ತು ಆನ್‌ಲೈನ್‌ನಲ್ಲಿ ಖರೀದಿಸಲು www.malabargoldanddiamonds.com ಗೆ ಭೇಟಿ ನೀಡಿ

1 ಸಂಪೂರ್ಣ ಪಾರದರ್ಶಕತೆ 2 ಜೀವನಪರ್ಯಂತ ಉಚಿತ ಮೇಯಿಂಟೆನೆನ್ಸ್ 3 ಚಿನ್ನ ವಿನಿಮಯದಲ್ಲಿ ಶೂನ್ಯ ಕಡಿತ 4 100% BIS 916 ಹಾಲ್‌ಮಾರ್ಕ್ ಶುದ್ಧ ಚಿನ್ನ 5 ಪರೀಕ್ಷಿಸಲಾಗಿರುವ ಮತ್ತು ಪ್ರಮಾಣೀಕೃತ ವಜ್ರಗಳು 6 ಗ್ಯಾರಂಟಿಡ್ ಬೈಬ್ಯಾಕ್ 7 ನಿಮ್ಮ ಆಭರಣವು ವಿಮೆಗೆ ಒಳಪಡುತ್ತದೆ 8 ಕ್ಯಾರೆಟ್ ವಿಶ್ಲೇಷಕ ಸೌಲಭ್ಯ 9 ಜವಾಬ್ದಾರಿಯುತ ಮೂಲದ ಚಿನ್ನ 10 ಅಕ್ಕಸಾಲಿಗರಿಗೆ ನ್ಯಾಯಯುತ ವೇತನ, ಪ್ರಯೋಜನಗಳು ಮತ್ತು ಉತ್ತಮ ಕೆಲಸ ಮಾಡುವ ವಾತಾವರಣ ನಿರ್ಮಾಣ

ದಾವಣಗೆರೆ, ಮಂಡಿಪೇಟೆ ದೂ: 08192– 231916, 7994435487

ಮಲಬಾರ್ ಗೋಲ್ಡ್ & ಡೈಮಂಡ್ಸ್

INDIA | USA | SINGAPORE | MALAYSIA | UAE | QATAR | KSA | OMAN | KUWAIT | BAHRAIN





16ನೇ ವರ್ಷದ ಪುಣ್ಯಸ್ಮರಣೆ

ಮಾಕನೂರು ಕೆಂಚಪ್ಪ
ಜರೀಕಟ್ಟೆ

ನೀವು ನಮ್ಮನ್ನಗಲಿ ಇಂದಿಗೆ 16 ವರ್ಷಗಳಾದವು. ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...

ಧರ್ಮಪತ್ನಿ: ಎಂ.ಗೀತಾಬಾಯಿ ಕೆಂಚಪ್ಪ, ಜರೀಕಟ್ಟೆ
- ಶ್ರೀ ಮಂಜುನಾಥ್ ರೈಸ್‌ಟೆಕ್, ಜರೀಕಟ್ಟೆ
- ನವೀನ್ ಟ್ರೇಡರ್ಸ್, ಎ.ಪಿ.ಎಂ.ಸಿ ಯಾರ್ಡ್
- ನವೀನ್ ಆಗ್ರೋ ಫರ್ಟಿಲೈಜರ್ಸ್, ಜರೀಕಟ್ಟೆ
- ನವೀನ್ ಸಿಮೆಂಟ್ಸ್, ಜರೀಕಟ್ಟೆ
- ಉತ್ಸವಾಂಬ ಎಂಟರ್‌ಪ್ರೈಸಸ್ ವೈನ್ ಶಾಪ್, ಜರೀಕಟ್ಟೆ

ಮಾಕನೂರು ಹಾಲಪ್ಪ, ದಿ. ನಾಗಪ್ಪ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಮಾಕನೂರು ಬಂಧು-ಮಿತ್ರರು, ಪವಾರ್, ಜಾಧವ್, ಸಾವಂತ್ ಬಂಧು-ಮಿತ್ರರು, ಜರೀಕಟ್ಟೆ ಗ್ರಾಮಸ್ಥರು.
ಮೊ: 98442 98442, 84534 55555





ಪೂಜ್ಯ ತಂದೆಯವರಾದ
ದಿ|| ಶ್ರೀ ರಾಯಾ ಅನಂತ್‌ರಾಯ್ಕರ್



ಪೂಜ್ಯ ದೊಡ್ಡಮ್ಮನವರಾದ
ದಿ|| ಶ್ರೀಮತಿ ರುಕ್ಮಿಣಿಬಾಯಿ ರಾಯಾ ರಾಯ್ಕರ್

ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಶ್ರೀಮತಿ ರುಕ್ಮಿಣಿ ಬಾಯಿ ರಾಯಾ ರಾಯ್ಕರ್

ಇವರು ತಮ್ಮ 77ನೇ ವಯಸ್ಸಿನಲ್ಲಿ ದಿನಾಂಕ : 22.11.2020ರ ಭಾನುವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ

ವೈಕುಂಠ ಸಮಾರಾಧನೆಯನ್ನು

ದಿ. : 05.12.2020ರ ಶನಿವಾರದಂದು ಮಧ್ಯಾಹ್ನ 1.00 ಗಂಟೆಗೆ ನಂ. 2563/1, ಗಣಪತಿ ದೇವಸ್ಥಾನದ ಪಕ್ಕ, 5ನೇ ಮೇನ್ ರೋಡ್, ಎಂಸಿಸಿ ಎ ಬ್ಲಾಕ್, ದಾವಣಗೆರೆಯಲ್ಲಿರುವ ಸ್ವಗೃಹದ ಎದುರಿನ ಮಡಿವಾಳ ಮಾಚಿದೇವರ ಸಮುದಾಯ ಭವನದಲ್ಲಿ ನೆರವೇರಿಸಲಾಗುವುದು.

ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಮನದಾಳದ ಅನಿಸಿಕೆ : ತಾಯಿಯೇ ದೇವರು. ನಿಮ್ಮ ದೈವೀ ಶಕ್ತಿಯಿಂದ ಕುಟುಂಬದವರಿಗೆ, ಸಂಬಂಧಿಕರಿಗೆ ಮತ್ತು ಆಪ್ತರಿಗೆ ಮಾರ್ಗದರ್ಶನ ನೀಡಿ, ಸರ್ವೇಜನ ಸುಖಿನೋ ಭವಂತು (ಎಲ್ಲರಿಗೂ ಒಳ್ಳೆಯದಾಗಲಿ) ಎಂಬ ಧ್ಯೇಯವನ್ನು ಪರಿಪಾಲಿಸಿದ್ದೀರಿ. ನಿಮ್ಮನ್ನು ಸ್ಪಂದಿಸಿದ ಅಪರಿಚಿತರನ್ನು ಸಹ ಕೇವಲ ನಿಮ್ಮನ್ನು ನೋಡಿದರೆ ಸಾಕು, ನಿಮ್ಮ ನಗು ಮುಖದಿಂದ ಅವರಿಗೆ ಸ್ವೀಕರಿಸಿ, ಸತ್ಕರಿಸಿದ್ದೀರಿ. ಯಾವಾಗಲೂ ಪ್ರತಿಯೊಬ್ಬರ ಕಷ್ಟಕ್ಕೆ, ಸುಖಕ್ಕೆ ಭಾಗಿಯಾಗಿ, ಸಾಧ್ಯವಾದಷ್ಟು ಸಹಾಯ ಮಾಡಿ ಎಲ್ಲರ ಮನ ಗೆದ್ದಿದ್ದೀರಿ. ಹಾಗೆಯೇ ಮನೆಯಲ್ಲಿ, ನಮ್ಮೆಲ್ಲರಲ್ಲಿ ದೊಡ್ಡಮ್ಮನವರ ಬಗ್ಗೆಯೂ ತಾಯಿಯ ಭಕ್ತಿಯನ್ನೇ ಮೂಡಿಸಿದ ನೀವೇ ಧನ್ಯ. ಈ ಸಂದರ್ಭದಲ್ಲಿ ತಂದೆ ಮತ್ತು ದೊಡ್ಡಮ್ಮನವರನ್ನು ನೆನಪಿಸಿಕೊಳ್ಳುತ್ತಿದ್ದೇವೆ. ನಿಮ್ಮ ಸದ್ಗುಣಗಳು ನಮ್ಮೆಲ್ಲರಿಗೂ ಬರಲಿ. ನಾವು ಸಹ ಬೇರೆಯವರ ಕಷ್ಟಕ್ಕೆ ಭಾಗಿಯಾಗಿ ಯಥಾಶಕ್ತಿ ಸಮಾಜಕ್ಕೆ ಸಹಾಯ ಮಾಡಲು ಆಶೀರ್ವದಿಸಿ.

ದುಃಖತಪ್ತರು : ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು. ಮೊ : 97400 98440

# ಜಗಳೂರು : ರೈತ ವಿರೋಧಿ ನೀತಿಗಳನ್ನು ಖಂಡಿಸಿ ರೈತ ಸಂಘದಿಂದ ಪ್ರತಿಭಟನೆ



ಜಗಳೂರು, ಡಿ.4- ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿಗಳನ್ನು ಖಂಡಿಸಿ ದೇಶಾದ್ಯಂತ ನಡೆಯುತ್ತಿರುವ ಹೋರಾಟವನ್ನು ಬೆಂಬಲಿಸಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಲ್ಲೂಕು ಘಟಕ ವತಿಯಿಂದ ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಯಿತು.

ಮನವಿ ಸಲ್ಲಿಸಿ ಮಾತನಾಡಿದ ರೈತ ಮುಖಂಡರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಎಪಿಎಂಸಿ ಕಾಯ್ದೆ, ವಿದ್ಯುಚ್ಛಕ್ತಿ ಕಾಯ್ದೆ, 2019ರ ಬೀಜ ಕಾಯ್ದೆಗಳಿಗೆ ತಿದ್ದುಪಡಿ ತಂದಿರುವುದು ರೈತರಿಗೆ ಮರಣ ಶಾಸನಗಳಾಗಿದ್ದು, ರೈತರಿಗೆ ಮಾರಕವಾಗಿರುವ ಈ ಕಾಯ್ದೆಗಳನ್ನು ಕೂಡಲೇ ಹಿಂಪಡೆಯಬೇಕು ಎಂದು ಆಗ್ರಹಿಸಿದರು.

ಈ ಬಾರಿ ತಾಲ್ಲೂಕು ಅತಿವೃಷ್ಟಿ ಪ್ರದೇಶವೆಂದು ಘೋಷಣೆಯಾಗಿದ್ದು, ಸಕಾಲದಲ್ಲಿ ರೈತರಿಗೆ ನಷ್ಟಕ್ಕನುಗುಣವಾಗಿ ಪರಿಹಾರವನ್ನು ನೀಡಲು ಕ್ರಮ ಕೈಗೊಳ್ಳಬೇಕು. ಮೆಕ್ಕೆಜೋಳವನ್ನು ಇದೀಗ ಮಾರುಕಟ್ಟೆಯಲ್ಲಿ 1,300 ರೂ.ಗೆ ಖರೀದಿ ಮಾಡುತ್ತಿದ್ದು, ರೈತರು ನಷ್ಟವನ್ನು ಅನುಭವಿಸುವಂತಾಗಿ ಸಾಲಗಾರರಾಗುವಂತಾಗಿದೆ. ಮೆಕ್ಕೆಜೋಳಕ್ಕೆ ಕನಿಷ್ಠ 3,500 ರೂ. ಹಾಗೂ ಶೇಂಗಾಗೆ 10 ಸಾವಿರ ರೂ.ಗಳನ್ನು ನಿಗದಿಗೊಳಿಸಿ, ಸರಿಯಾದ ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕು. ಇಲ್ಲದಿದ್ದರೆ ಧರಣಿ ಸತ್ಯಾಗ್ರಹವನ್ನು ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಶಾಸಕ ಎಸ್.ವಿ. ರಾಮಚಂದ್ರ ಅವರಿಗೆ ರೈತ ಸಂಘದ ಹುಚ್ಚವ್ವನಹಳ್ಳಿ ಮಂಜುನಾಥ್ ಬಣದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿರಂಜೀವಿ ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯುವಂತೆ ಒತ್ತಾಯಿಸಿದರು. ಆಡಳಿತ ಸರ್ಕಾರ ರೈತರ ಮೇಲೆ ನಡೆಸುತ್ತಿರುವ ದಬ್ಬಾಳಿಕೆಗೆ ಕಡಿವಾಣ ಹಾಕಿ, ರೈತ ವಿರೋಧಿ ನೀತಿಗಳನ್ನು ಕೈಬಿಡಬೇಕು ಎಂದು ಖಂಡಿಸಿದರು.

ಸರ್ಕಾರ ರೈತಪರ ಕಾಳಜಿ ಹೊಂದಿದ್ದು, ಶೀಘ್ರವೇ ಮೆಕ್ಕೆಜೋಳ ಕೇಂದ್ರ ತೆರೆಯಲು ಸರ್ಕಾರದ ಗಮನ ಸೆಳೆಯುವುದಾಗಿ ಶಾಸಕರು ಭರವಸೆ ನೀಡಿದರು.

ಜಿಲ್ಲಾ ಕಾರ್ಯದರ್ಶಿ ಸತೀಶ್, ತಾಲ್ಲೂಕು ಕಾರ್ಯದರ್ಶಿ ಲೋಕೇಶ್, ಶರಣಪ್ಪ, , ಮುಖಂಡರಾದ ಪ್ರಹ್ಲಾದಪ್ಪ, ಕೆಂಚಪ್ಪ, ತಿಪ್ಪೇಸ್ವಾಮಿ, ಚಿಕ್ಕಬನ್ನಿಹಟ್ಟಿ ವೀರೇಶ್, ಗುರುಮೂರ್ತಿ, ಸುಪುತ್ರಪ್ಪ, ಅಜ್ಜಪ್ಪ, ಹನುಮಂತಪ್ಪ, ಕುಮಾರ, ಮಂಜುನಾಥ, ರಂಗಪ್ಪ, ಶಾಂತಪ್ಪ ಇನ್ನಿತರರಿದ್ದರು.

# ಯತ್ನಾಳ್ ಪ್ರತಿಕೃತಿ ದಹಿಸಿ ಕನ್ನಡಪರ ಹೋರಾಟಗಾರರ ಆಕ್ರೋಶ



ದಾವಣಗೆರೆ, ಡಿ.4- ಕನ್ನಡಪರ ಹೋರಾಟಗಾರರು ವಸೂಲಿಗಾರರು ಎಂದು ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಹೀಯಾಳಿಸಿರುವುದನ್ನು ಖಂಡಿಸಿ, ಜಿಲ್ಲಾ ಕನ್ನಡಪರ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಕನ್ನಡಪರ ಹೋರಾಟಗಾರರು ಇಂದು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಅಂಬೇಡ್ಕರ್ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ಮುಖೇನ ಜಯದೇವ ವೃತ್ತದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು, ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಅವರ ಪ್ರತಿಕೃತಿ ದಹಿಸಿ, ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ, ಮರಾಠ ಅಭಿವೃದ್ಧಿ ನಿಗಮ ಸ್ಥಾಪನೆ ವಿರೋಧಿಸಿದರು. ಪ್ರತಿಭಟನೆಯಲ್ಲಿ ಟಗರಿಗೆ ಕನ್ನಡಿಗರು, ಕತ್ತೆಗೆ ರಾಜಕಾರಣಿಗಳನ್ನು ಹೋಲಿಸಿ ನಾಮಫಲಕ ನೇತು ಹಾಕಿದ್ದು ಕಂಡು ಬಂತು.

ಈ ಕೂಡಲೇ ಮರಾಠ ಅಭಿವೃದ್ಧಿ ನಿಗಮವನ್ನು ರದ್ದುಪಡಿಸಬೇಕು. ಎಲ್ಲಾ ಜಾತಿಯ ಬಡವರಿಗೆ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಗೌರವಾಧ್ಯಕ್ಷ ಕೆ.ಜಿ. ಯಲ್ಲಪ್ಪ, ಅಧ್ಯಕ್ಷ ಎನ್.ಹೆಚ್. ಹಾಲೇಶ್, ಕಾರ್ಯಾಧ್ಯಕ್ಷ ವಿ. ಅವಿನಾಶ್, ಎಸ್. ರಾಜು, ನಾಗರಾಜ, ಡಾ. ಬಿ. ವಾಸುದೇವ್, ಎಂ.ಎ. ಸಾಧಿಕ್, ಭೋಜರಾಜು, ಐಗೂರು ಸುರೇಶ್, ಡಿ. ಬಸವರಾಜು ಸೇರಿದಂತೆ ಇತರರು ಭಾಗವಹಿಸಿದ್ದರು.

## ರೋಟರಿ : ನಗರದಲ್ಲಿ ಇಂದು ಕನ್ನಡ ರಾಜ್ಯೋತ್ಸವ

ರೋಟರಿ ಬಾಲಭವನದಲ್ಲಿ ರೋಟರಿ ಮತ್ತು ರೋಟರ್ಯಾಕ್ಟ್ ಸಂಸ್ಥೆ ದಾವಣಗೆರೆ ದಕ್ಷಿಣದಿಂದ ಕನ್ನಡ ರಾಜ್ಯೋತ್ಸವ ಹಾಗೂ ಗೌರವ ಸನ್ಮಾನ ಕಾರ್ಯಕ್ರಮಗಳನ್ನು ಸಂಜೆ 5.30ಕ್ಕೆ ಆಯೋಜಿಸಲಾಗಿದೆ. ಡಾ. ಎಂ.ಜಿ.ಈಶ್ವರಪ್ಪ, ಎನ್.ಜಿ ಪುಟ್ಟಸ್ವಾಮಿ, ಡಾ॥ ಹೆಚ್. ಗಿರಿಜಮ್ಮ, ಪಿ. ನಿತೀಶ್, ರಮಣ ಲಾಲ್ ಪಿ. ಸಂಘವಿ ಅವರುಗಳನ್ನು ಸನ್ಮಾನಿಸಲಾಗುವುದು.

## ಆರ್.ಬಿ.ಐ. ತಡೆ

(1ನೇ ಪುಟದಿಂದ) ವರ್ಷಕ್ಕೆ ಡಿವಿಡೆಂಡ್ ನೀಡದಂತೆ ರಿಸರ್ವ್ ಬ್ಯಾಂಕ್ ಆದೇಶಿಸಿದೆ.

ಪ್ರಸಕ್ತ ಕಂಡು ಬರುತ್ತಿರುವ ಒತ್ತಡ ಹಾಗೂ ಕೊರೊನಾದಿಂದ ಕಂಡು ಬರುತ್ತಿರುವ ಅನಿಶ್ಚಿತತೆಗಳ ಹಿನ್ನೆಲೆಯಲ್ಲಿ ಬ್ಯಾಂಕುಗಳು ತಮ್ಮ ಬಂಡವಾಳವನ್ನು ಉಳಿಸಿಕೊಂಡು ಆರ್ಥಿಕತೆಗೆ ಬೆಂಬಲ ನೀಡಬೇಕಿದೆ ಹಾಗೂ ನಷ್ಟಗಳಾಗಿದ್ದರೆ ಸರಿದೂಗಿಸಿಕೊಳ್ಳಬೇಕಿದೆ. ಬ್ಯಾಂಕುಗಳ ಸೆಪ್ಟೆಂಬರ್ ತಿಂಗಳ ಹಣಕಾಸು ಪರಿಸ್ಥಿತಿ ಪರಿಗಣಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಆರ್.ಬಿ.ಐ. ತಿಳಿಸಿದೆ.

ಆರ್.ಬಿ.ಐ.ನ ಈ ಕ್ರಮದ ಬಗ್ಗೆ ಶೀಘ್ರದಲ್ಲೇ ಮಾರ್ಗಸೂಚಿಗಳನ್ನು ಪ್ರಕಟಿಸಲಾಗುವುದು. ಆದರೆ, ಬ್ಯಾಂಕೇತರ ಹಣಕಾಸು ಸಂಸ್ಥೆಗಳ ಡಿವಿಡೆಂಡ್ ವಿತರಣೆ ಬಗ್ಗೆ ರಿಸರ್ವ್ ಬ್ಯಾಂಕ್ ಯಾವುದೇ ಸೂಚನೆ ಪ್ರಕಟಿಸಿಲ್ಲ.

## ಹೊನ್ನಾಳಿ ಅಪರಿಚಿತ ಮಹಿಳೆ ಶವ ಪತ್ತೆ

ಹೊನ್ನಾಳಿ, ಡಿ. 4 - ತುಂಗಭದ್ರಾ ಸೇತುವೆ ಬಳಿ ಸುಮಾರು 45 ರಿಂದ 50 ವರ್ಷದ ಮಹಿಳೆಯ ಅಪರಿಚಿತ ಶವ ಇಂದು ಸಂಜೆ ಪತ್ತೆಯಾಗಿದೆ ಎಂದು ಹೊನ್ನಾಳಿ ಸಬ್‌ಇನ್‌ಸ್ಪೆಕ್ಟರ್ ಬಸನಗೌಡ ಬಿರಾದಾರ್ ತಿಳಿಸಿದ್ದಾರೆ. ನೀಲಿ ಸೀರೆ, ಹಸಿರು ಬಳೆ ತೊಟ್ಟಿರುವುದಾಗಿ ತಿಳಿದುಬಂದಿದೆ.

## ಡಿ.8ರಂದು ಭಾರತ್ ಬಂದ್

(1ನೇ ಪುಟದಿಂದ) ಎಂದು ತಿಳಿಸಿದ್ದಾರೆ.

ಶುಕ್ರವಾರ ನಡೆಸಲಾದ ರೈತ ಮುಖಂಡರ ಸಭೆಯಲ್ಲಿ ಡಿಸೆಂಬರ್ 8ರಂದು ಭಾರತ್ ಬಂದ್‌ಗೆ ಕರೆ ನೀಡಲು ನಿರ್ಧರಿಸಲಾಗಿದೆ. ಅಂದು ಎಲ್ಲಾ ಟೋಲ್ ಪ್ಲಾಜಾಗಳನ್ನು ವಶಕ್ಕೆ ತೆಗೆದುಕೊಳ್ಳ ಲಾಗುವುದು ಎಂದು ಇನ್ನೋರ್ವ ರೈತ ನಾಯಕ ಹರವಿಂದರ್ಸಿಂಗ್ ಲಖ್ವಾಲ್ ಹೇಳಿದ್ದಾರೆ.

ಕೃಷಿ ಕಾಯ್ದೆಗಳನ್ನು ರದ್ದುಗೊಳಿಸದೇ ಹೋದರೆ ಮುಂಬರುವ ದಿನಗಳಲ್ಲಿ ದೆಹಲಿಯ ಎಲ್ಲಾ ರಸ್ತೆಗಳನ್ನು ಬಂದ್ ಮಾಡಲು ನಾವು ಯೋಜಿಸಿದ್ದೇವೆ ಎಂದವರು ತಿಳಿಸಿದ್ದಾರೆ.

ಹರಿಯಾಣ, ಪಂಜಾಬ್ ಮತ್ತಿತರ ರಾಜ್ಯಗಳ ರೈತರು ಹೆದ್ದಾರಿ ತಡೆ ನಡೆಸಿರುವುದರಿಂದ ದೆಹಲಿಯ ಗಡಿ ಪ್ರದೇಶಗಳು ಕಳೆದ ಒಂಭತ್ತು ದಿನಗಳಿಂದ ಕಿಷ್ಕಿಂಧೆಯಂತಾಗಿವೆ. ಸರ್ಕಾರದ ಜೊತೆ ನಡೆಸಲಾದ ಮಾತುಕತೆಗಳು ಇದುವರೆಗೂ ಫಲ ನೀಡಿಲ್ಲ.

ನೂತನ ಕೃಷಿ ಕಾಯ್ದೆಗಳು ರೈತ ವಿರೋಧಿಯಾಗಿದ್ದು, ಇದರಿಂದ ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆ ರದ್ದಾಗಲಿದೆ ಎಂದು ರೈತ ಸಮುದಾಯ ಕಳವಳ ವ್ಯಕ್ತಪಡಿಸಿದೆ.

ಆದರೆ, ನೂತನ ಕಾಯ್ದೆಗಳಿಂದ ರೈತರಿಗೆ ಹೊಸ ಅವಕಾಶಗಳು ಸಿಗುತ್ತವೆ ಹಾಗೂ ಹೊಸ ತಂತ್ರಜ್ಞಾನ ಲಭ್ಯವಾಗುತ್ತದೆ. ಈಗಿರುವ ಬೆಂಬಲ ಬೆಲೆ ವ್ಯವಸ್ಥೆ ರದ್ದುಪಡಿಸುವುದಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.

## ಸಂಘಕ್ಕೆ ಪರಮೇಶ್ವರ ಗೌಡರು ಅಧ್ಯಕ್ಷ

(1ನೇ ಪುಟದಿಂದ) ಎಸ್.ಧನ್ಯಾನಾಯ್ಕ, ಶ್ರೀಮತಿ ಹೇಮಾವತಿ, ಶ್ರೀಮತಿ ಸವಿತಾ, ಆರ್.ಗಂಗಾಧರಪ್ಪ ಅವರುಗಳು ಸಭೆ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದರು.

ಶಾಮನೂರು ಕಲ್ಲೇಶಪ್ಪ ಅವರ ನಿಧನದಿಂದಾಗಿ ತೆರವಾಗಿದ್ದ ನಿರ್ದೇಶಕ ಸ್ಥಾನಕ್ಕೆ ಕಳೆದ ವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದ ಕಲ್ಲೇಶಪ್ಪ ಅವರ ಪುತ್ರ ಎಸ್.ಕೆ.ಪವಿತ್ರ ಶಾಮನೂರು ಅವರೂ ಸಹ ಇಂದಿನ ಸಭೆಯಲ್ಲಿ ಉಪಸ್ಥಿತರಿದ್ದರು.

ಸಹಕಾರಿ ಸಂಘಗಳ ಸಹಾಯಕ ನಿಬಂಧಕರ ಕಚೇರಿಯ ಸಹಕಾರ ಅಭಿವೃದ್ಧಿ ಅಧಿಕಾರಿಯೂ ಆಗಿರುವ ಮಾರಾಟಾಧಿಕಾರಿ ಜಿ.ಎಸ್.ಸುರೇಂದ್ರ ಅವರು ಚುನಾವಣಾ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು. ಸಂಘದ ಕಾರ್ಯದರ್ಶಿ ಡಿ.ಎಸ್.ಜಾಧವ್ ಉಪಸ್ಥಿತರಿದ್ದರು.

## ನಗರ ಮತ್ತು ಗ್ರಾಮಾಂತರದಲ್ಲಿ ಇಂದು ವಿದ್ಯುತ್ ಸರಬರಾಜು ವ್ಯತ್ಯಯ

ಹೊನ್ನೂರು, ಇಂಡಸ್ಟ್ರಿಯಲ್ ಏರಿಯಾ, ಕಾಡಜ್ಜಿ, ಆವರಗೆರೆ, ಆನಗೋಡು, ಮಹಾವೀರ, ರವಿ, ಗೋಶಾಲೆ, ಎನ್.ಜೆ.ವೈ, ಲಿಂಗದಹಳ್ಳಿ, ಎಸ್.ಟಿ.ಪಿ. ಆವರಗೆರೆ ವಿದ್ಯುತ್ ಕೇಂದ್ರಗಳಿಂದ ಸರಬರಾಜಾಗುವ ಎಲ್ಲಾ ವಿದ್ಯುತ್ ಮಾರ್ಗಗಳಲ್ಲಿ ಬರುವ ನಗರ ಮತ್ತು ಗ್ರಾಮಾಂತರಗಳಲ್ಲಿ ಇಂದು ಬೆಳಿಗ್ಗೆ 11 ರಿಂದ ಸಂಜೆ 6 ರವರೆಗೆ, ವಿದ್ಯುತ್ ವ್ಯತ್ಯಯ ಉಂಟಾಗಲಿದೆ.


**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ, ವಾಜಪೇಯಿ ಲೇ ಔಟ್‌ನಲ್ಲಿ, 40x60 East, 50x80 North, 40x33 West, 30x40 West, 30x40 Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ, ಮನೆಗಳು ಬಾಡಿಗೆಗೆ, ಲೀಜಿಗೆ ಇವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x48 ಪೂರ್ವ, 30x56 ಪೂರ್ವ. ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 20x30 ದಕ್ಷಿಣ, 30x50 ಪೂರ್ವ. ಹೈಟೆಕ್ ಲೇಔಟ್ ನಲ್ಲಿ 30x50 ಪಶ್ಚಿಮ
ಸ್ವಾಮಿ ಏಜೆಂಟ್, ವಿದ್ಯಾನಗರ
ಮೊ. 97421 44715
ಶಾಮನೂರು ನಾಗರಾಜ
ಮೊ.98448 83303

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ,
20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ಮನೆ ಮಾರಾಟಕ್ಕಿದೆ**
ದಾವಣಗೆರೆ ತುಂಗಭದ್ರಾ ಬಡಾವಣೆ (KHB) ಮೊದಲನೇ ಹಂತದಲ್ಲಿ, ವಾಟರ್ ಟ್ಯಾಂಕ್ ಹತ್ತಿರ, 30x50 ಅಳತೆಯ ಉತ್ತರ ದಿಕ್ಕಿನ ಮನೆ (#1309) ಮಾರಾಟಕ್ಕಿದೆ. ಆಸಕ್ತರು ಸಂಪರ್ಕಸಿ.
98443 22455

**ಸೈಟುಗಳು ಮಾರಾಟಕ್ಕಿವೆ**
ನವೋದಯ ಸ್ಕೂಲ್ ಹತ್ತಿರ 30x50 South, ನಿಜಲಿಂಗಪ್ಪ ಬಡಾವಣೆಯಲ್ಲಿ 40x60 South, S.S. ಬಡಾವಣೆ ಎ ಬ್ಲಾಕ್‌ನಲ್ಲಿ 30x40, 30x40 West ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
1) ವಿನಾಯಕ ಬಡಾವಣೆಯಲ್ಲಿ 30x40 ಪಶ್ಚಿಮ, 40x50 ಪೂರ್ವ. 2) ಬನಶಂಕರಿ ಬಡಾವಣೆಯಲ್ಲಿ 30x50 ಪಶ್ಚಿಮ, 30x55 ಪೂರ್ವ, ದಕ್ಷಿಣ ಕಾರ್ನರ್. 3) 14 ಸಾವಿರ ಅಡಿ ದೇವರಬೆಳಕೆರೆ ರಸ್ತೆ, ಬಾಡಿಗೆಗೆ ಇದೆ.
ಶಾಮನೂರು ಧನ್ಯಕುಮಾರ್
ಮೊ.97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
ಮೊ.97421 44715

**ಬೇಕಾಗಿದ್ದಾರೆ**
ಬ್ಯೂಟಿಷಿಯನ್ ಬೇಕಾಗಿದ್ದಾರೆ.
ಅನುಭವುಳ್ಳವರಿಗೆ ಆದ್ಯತೆ.
ಸಂಬಳ : Rs 10,000+
ತರಳಬಾಳು ಬಡಾವಣೆ, 8ನೇ ಕ್ರಾಸ್, ಹದಡಿ ರಸ್ತೆ, ದಾವಣಗೆರೆ.
91644 91190

**ಸೈಟು ಬೇಕಾಗಿದೆ**
ವಿದ್ಯಾನಗರ, ಶಿವಕುಮಾರಸ್ವಾಮಿ, ತರಳಬಾಳು ಬಡಾವಣೆಯಲ್ಲಿ ಸೈಟು ಕೊಳ್ಳುವುದಕ್ಕೆ ಬೇಕಾಗಿದೆ.
ಆಸಕ್ತರು ಸಂಪರ್ಕಿಸಿ :
98809 33630

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ 30×40 ಪಶ್ಚಿಮ ಕುವೆಂಪು ಬಡಾವಣೆ ಮನೆಗಳು 28×48 ಪೂರ್ವ, ಆರ್.ಟಿ.ಓ. ರಿಂಗ್ ರೋಡ್ ಸರ್ಕಲ್ ಹತ್ತಿರ 40×60 ಮನೆ, ಪೂರ್ವ ದಿಕ್ಕು, KHB ಕಾಲೋನಿ, 30×40 ಪೂರ್ವ ದಿಕ್ಕು ಕುವೆಂಪು ಬಡಾವಣೆ ಉತ್ತರ 40×60, ಪಶ್ಚಿಮ, ಸಿದ್ದವೀರಪ್ಪ ಬಡಾವಣೆ ಪಶ್ಚಿಮ, 30×50 ಪೂರ್ವ, ವಿನೋಬನಗರ, ರಿಂಗ್ ರೋಡ್ ಹತ್ತಿರ, 30×40 ಉತ್ತರ, ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**ಕಿರಾಣಿ ಅಂಗಡಿ ಮಾರಾಟಕ್ಕಿದೆ.**
ಸಂಪರ್ಕಿಸಿ :
99016 36693

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಮನೆ ಬಾಡಿಗೆ ಇದೆ**
ಜಯನಗರದಲ್ಲಿ 2 ಬೆಡ್‌ರೂಂ ಮನೆ ಇಂಡಿಪೆಂಡೆಂಟ್ ಮನೆ, ಪಶ್ಚಿಮ ಬಾಗಿಲು, ಹೊಸ ಮನೆ , ಬಸ್ ಸ್ಟ್ಯಾಂಡಿಗೆ ಹತ್ತಿರವಿದೆ.
ಮಂಜುನಾಥ್, ರಿಯಲ್ ಎಸ್ಟೇಟ್ ಏಜೆಂಟ್
98444 91792

**ಬೇಕಾಗಿದೆ**
3 ಫೇಸ್ 15 ಅಥವಾ 20 KVA ಬಾಕ್ಸ್ ಜನರೇಟರ್ ಬೇಕಾಗಿದೆ. ಸಂಪರ್ಕಿಸಿ:
99862 93328

**ಬೇಕಾಗಿದ್ದಾರೆ**
ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷರು-ಮಹಿಳೆಯರು ಬೇಕಾಗಿದ್ದಾರೆ. ವಿದ್ಯಾರ್ಹತೆ SSLC ಪಾಸ್ ಆದವರು.
ಆಸಕ್ತರು ಸಂಪರ್ಕಿಸಿ: K.B.R. ಇಂಡಸ್ಟ್ರೀಸ್
K.B.R. ಕಾಂಪ್ಲೆಕ್ಸ್, 109 ಟಿ.ಸಿ.ಲೇಔಟ್ RMC ಲಿಂಕ್ ರೋಡ್, ಮಹಾವೀರ್ ಭವನ ಹತ್ತಿರ ದಾವಣಗೆರೆ.
97427 52669 63621 47549
94484 42694

**ಮನೆ ಕೈ ತೋಟ ಹಾಗೂ ಜಮೀನಿಗೆ ಉಪಯೋಗಿಸಲು ಉತ್ತಮವಾದ ಕಾಂಪೋಸ್ಟ್ ಗೊಬ್ಬರ ದೊರೆಯುತ್ತದೆ.**
ಸಂಪರ್ಕಿಸಿ : ದಾವಣಗೆರೆ.
ಮೊ. 93411-71212

**ಮನೆ ಬಾಡಿಗೆ ಇದೆ**
ಎಸ್.ಎಸ್. ಬಡಾವಣೆ 'ಎ' ಬ್ಲಾಕ್‌ನಲ್ಲಿ 2 ಬೆಡ್‌ರೂಂ ಮನೆ ಮೊದಲನೇ ಮಹಡಿಯಲ್ಲಿ, ಪೂರ್ವ ಸೈಟ್, ಪೂರ್ವ ಬಾಗಿಲು, ಶಾಮನೂರು ರಸ್ತೆ ಹತ್ತಿರ, ಕರ್ನಾಟಕ ಬ್ಯಾಂಕ್ ಹಿಂಭಾಗ ಬಾಡಿಗೆ ಇದೆ.
ನಾಗಭೂಷಣ
97407 23330

**ಕೆಲಸಗಾರರು ಬೇಕಾಗಿದ್ದಾರೆ**
ವಿನಾಯಕ ಸಾರಿಗೆ ಸಂಸ್ಥೆಯಲ್ಲಿ ಚಾಲಕ ಹಾಗೂ ನಿರ್ವಾಹಕ ಹುದ್ದೆಗೆ ಕೆಲಸಗಾರರು ಬೇಕಾಗಿದ್ದಾರೆ.
ಆಕರ್ಷಕ ವೇತನ ನೀಡಲಾಗುವುದು
(ಪುರುಷರಿಗೆ/ಮಹಿಳೆಯರಿಗೆ ಆದ್ಯತೆ)
94824 76109
91642 22937

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಸ್. ಎಸ್. ಲೇಔಟ್ ಬಿ ಬ್ಲಾಕ್ 3ನೇ 'ಎ' ಮೇನ್‌ನಲ್ಲಿ, 2514/9, ಮೊದಲನೇ ಮಹಡಿಯಲ್ಲಿ 2 ಅಥವಾ 3 ಬೆಡ್ ರೂಂ ಮನೆ ಬಾಡಿಗೆಗಿದೆ. ಬೋರ್/ ಮುನ್ಸಿಪಲ್ ನೀರಿನ ಸೌಕರ್ಯವಿದೆ.
ಸಂಪರ್ಕಿಸಿ:
95911 11584

**ಹೋಟೆಲ್ ಮಾರಾಟಕ್ಕಿದೆ**
ದಾವಣಗೆರೆ ನಗರದ ಎಂ.ಸಿ.ಸಿ. 'ಬಿ' ಬ್ಲಾಕ್‌ನಲ್ಲಿ ಪ್ರತಿಷ್ಠಿತ ಹೋಟೆಲ್ ಮಾರಾಟಕ್ಕಿದೆ. ಸಂಪರ್ಕಿಸಿ :
99013 43555

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
6 BHK ಮನೆ 60x40 ವಿಸ್ತೀರ್ಣ, ಕಾರ್ ಪಾರ್ಕಿಂಗ್ ವ್ಯವಸ್ಥೆಯುಳ್ಳ ಡ್ಯೂಪ್ಲೆಕ್ಸ್ ಮನೆ # 1935/7, 10ನೇ ಕ್ರಾಸ್ ಸಿದ್ದವೀರಪ್ಪ ಬಡಾವಣೆಯಲ್ಲಿ ಮಾರಾಟಕ್ಕಿದೆ.
ಸಂಪರ್ಕಿಸಿ: 99007 00091

**ಮನೆ ಬಾಡಿಗೆಗೆ / ಭೋಗ್ಯಕ್ಕಿದೆ**
ಗ್ರೌಂಡ್ ಫ್ಲೋರ್ ನಲ್ಲಿ 3 BHK, ಹಾಗೂ ಎರಡನೇ ಮಹಡಿಯಲ್ಲಿ 1 BHK ಉತ್ತರ ದಿಕ್ಕಿನ ಮುಂಬಾಗಿಲುವುಳ್ಳ ಮನೆ ಬಾಡಿಗೆಗಿದೆ ಹಾಗೂ ಕಾರ್ ಪಾರ್ಕಿಂಗ್, ಬೋರ್- ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಮನೆಗಳು, ನಂ. 651, ಶ್ರೀ ಕಟೀಲು, 6ನೇ ಕ್ರಾಸ್, ಶ್ರೀನಿವಾಸ ನಗರ, ಹದಡಿ ರಸ್ತೆ, ದಾವಣಗೆರೆ.
70194 27951, 93410 14488

**ಬೇಕಾಗಿದ್ದಾರೆ**
ನುರಿತ ಕೇಬಲ್ ಆಪರೇಟರ್ ಬೇಕಾಗಿದ್ದಾರೆ. SSLC Pass/Fail
ಸಂಪರ್ಕಿಸಿ:
99022 09820
80734 47621

**ವಾಚ್‌ಮನ್ ಬೇಕಾಗಿದ್ದಾರೆ**
ಶಾಲೆಯಲ್ಲಿ ಕೆಲಸ ಮಾಡಲು ವಾಚ್‌ಮನ್ ಬೇಕಾಗಿದ್ದಾರೆ.
ಸಂಪರ್ಕಿಸಿ :
94492 66133
94488 39229

**ಬೇಕಾಗಿದ್ದಾರೆ**
ಕಿಚನ್ ಸೂಪರ್ ವೈಸರ್, ವೈಟ್ಟರ್, ಕ್ಯಾಪ್ಟನ್ಸ್, ಕುಕ್ ಬೇಕಾಗಿದ್ದಾರೆ.
ಸಂಪರ್ಕಿಸಿ:
ಫುಡ್ಡೀಸ್ ಮತ್ತು ಗ್ರೀನ್‌ಪಾರ್ಕ್ ಹೋಟೆಲ್
99804 35564, 98861 56688

**ಗೋಡೌನ್ ಬಾಡಿಗೆಗೆ ಇದೆ**
ನಗರದ KR ರಸ್ತೆಯಲ್ಲಿ ಕಾಂಪೌಂಡ್ , ವಾಚ್‌ಮ್ಯಾನ್ ಹಾಗೂ ಲಾರಿ ಪಾರ್ಕಿಂಗ್ ವ್ಯವಸ್ಥೆ ಇರುವ 1500 ಅಡಿಯ ಗೋಡೌನ್ ಬಾಡಿಗೆಗೆ ದೊರೆಯುತ್ತದೆ.
ಸಂಪರ್ಕಿಸಿ:
99862 93328
87929 11665

**ಮನೆ ಬಾಡಿಗೆಗಿದೆ**
ಮಹಡಿ ಮನೆ, ಡಬಲ್ ಬೆಡ್ ರೂಂ, ಸಸ್ಯಹಾರಿಗಳಿಗೆ ಮಾತ್ರ
ನಂ. 3815, 4ನೇ ಕ್ರಾಸ್, 18ನೇ ಮೇನ್, ಬಾಪೂಜಿ ಸ್ಕೂಲ್ ಹತ್ತಿರ, ಕುವೆಂಪು ನಗರ, ಎಂಸಿಸಿ ಬಿ ಬ್ಲಾಕ್, ದಾವಣಗೆರೆ-04
94802 49340

**SBI Bank ಗ್ರಾಹಕರ ಸೇವಾ ಕೇಂದ್ರದಲ್ಲಿ**
ಜನ್‌ಧನ್ ಖಾತೆ ಮಾಡಲಾಗುತ್ತದೆ ('0' Account Open)
#264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005

**ಬೇಕಾಗಿದ್ದಾರೆ**
ಬಾಳ ಸಂಗಾತಿಗಾಗಿ ಮದುವೆ ವಯಸ್ಸಿನ ವಿಧವೆಯಾದವರು, ವೀರಶೈವ ಧರ್ಮದವರಾಗಿರಬೇಕು ಮತ್ತು ಮನೆ ಕೆಲಸಕ್ಕೆ ಒಬ್ಬ ಹೆಣ್ಣು ಮಗಳು ಬೇಕಾಗಿದ್ದಾರೆ. ಮನೆ ಶಿವಾಲಿ ಟಾಕೀಸ್ ಹತ್ತಿರ, ದಾವಣಗೆರೆ.
90086 96322 81511 28349

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**TIRUU FILM INSTITUTE**
Acting Course-5000/-
Direction Course-6000/-
Editing Course-7000/-
50% Online Classes
For Details Whatsapp
91104 16055, 63632 18756

**ಬೇಕಾಗಿದ್ದಾರೆ**
ಆಪೆ ಆಟೋ ಡೀಸೆಲ್ ಪ್ಯಾಸೆಂಜರ್, ಗೂಡ್ಸ್ ಆಪೆ ಎಲ್‌ಪಿಜಿ ತ್ರಿಚಕ್ರ ವಾಹನಗಳ
ಡೀಸೆಲ್ ಮೆಕ್ಯಾನಿಕ್ - 4
ಕಂಪ್ಯೂಟರ್ ಆಪರೇಟರ್ - 2
ಆಸಕ್ತರು ಸೂಕ್ತ ದಾಖಲಾತಿಗಳೊಂದಿಗೆ ನೇರವಾಗಿ ಸಂಪರ್ಕಿಸಿ:
ಸಮಯ: ಮ 3 ರಿಂದ 6., ಫೋನ್/ಮೊಬೈಲ್ ವಿಚಾರಣೆ ಇರುವುದಿಲ್ಲ
ಗಣೇಶ ಮೋಟಾರ್
ಎಲ್.ಐ.ಸಿ. ಆಫೀಸ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ-6

**ಬೇಕಾಗಿದ್ದಾರೆ**
ಕೆ.ಜಿ.ಪಿ. ಗೋಲ್ಡ್ ಪ್ಯಾಲೇಸ್‌ನಲ್ಲಿ ಕೆಲಸ ಮಾಡಲು ಸೇಲ್ಸ್ ಮೆನ್ ಬೇಕಾಗಿದ್ದಾರೆ. ವೇತನ 15000 ತಿಂಗಳಿಗೆ ಮೊದಲು ಬಂದವರಿಗೆ ಆದ್ಯತೆ.
88673 14814

**ವಾಟರ್ ಪ್ರೂಫಿಂಗ್**
ನಿಮ್ಮ ಮನೆ, ಬಿಲ್ಡಿಂಗ್ ಕಟ್ಟಡಗಳ ಬಾಲ್ಕನಿ, ಟರೇಸ್, ಬಾತ್‌ರೂಂ, ಸಂಪು, O.H. ಟ್ಯಾಂಕ್, ಗಾರ್ಡನ್ ಏರಿಯಾ, ಮೆಟ್ಟಿಲುಗಳು ಯಾವುದೇ ರೀತಿಯ ನೀರಿನ ಲೀಕೇಜ್ ಇದ್ದರೆ ಸಂಪರ್ಕಿಸಿ :
8095509025
ಕೆಲಸ 100 % ಗ್ಯಾರಂಟಿ

**EXCLUSIVE CAREER OPPORTUNITY FOR YOUNG GRADUATES**
We now provide you the opportunity to be a part of most Company in INDIA Campus to Entrepreneur Unique benefits: Fixed Salary+Huge Incentive +Health Coverage+PF+Foreign Trips. Location Davangere.
9886428601

**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು ರಾಗಿಮಸಲವಾಡ ಗ್ರಾಮದಲ್ಲಿ 6 ಎಕರೆ ಜಮೀನು ಮಾರಾಟಕ್ಕಿದೆ.
(ಬೋರ್ ಹಾಗೂ ತಂತಿ ಬೇಲಿ ಹೊಂದಿದೆ)
ಸಂಪರ್ಕಿಸಿ:
83103 61921

**ಬೇಕಾಗಿದ್ದಾರೆ**
Old age Care Center ನಲ್ಲಿ ರಾತ್ರಿ ಪಾಳೆಯದಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
89711 92936
76250 15036




**12ನೇ ಪುಣ್ಯಸ್ಮರಣೆ**

ಶ್ರೀಮತಿ ಮಟ್ಟಿಕಲ್ ಹನುಮಮ್ಮ
ಬಿ. ರುದ್ರಪ್ಪ

*ನೀವು ನಮ್ಮನ್ನಗಲಿ ಇಂದಿಗೆ 12 ವರ್ಷಗಳು ಕಳೆದಿವೆ. ಸದಾ ತಮ್ಮ ನೆನಪಿನಲ್ಲಿ ಹಾಗೂ ತಾವು ಹಾಕಿಕೊಟ್ಟ ಹಾದಿಯಲ್ಲೇ ನಡೆಯುತ್ತಿರುವ,*

ಮಕ್ಕಳು : ಪ್ರದೀಪ್ ಕುಮಾರ್, ರಮೇಶ್, ಶಿವಮ್ಮ (ಶೋಭ),
ಅಳಿಯಂದಿರಾದ : ಎಂ. ವೆಂಕೋಬಪ್ಪ
ಮೊಮ್ಮಕ್ಕಳಾದ : ರಶ್ಮಿ, ಅಭಿಷೇಕ್, ಪೂಜಾ ಸುಹಾಸ್, ಸುಮಂತ, ಸುಬ್ರಹ್ಮಣ್ಯ, ತಿಪ್ಪೇಸ್ವಾಮಿ,
14ನೇ ಕ್ರಾಸ್, ವಿದ್ಯಾನಗರ, ದಾವಣಗೆರೆ.


**ಬೇಕಾಗಿದ್ದಾರೆ**
ದಾವಣಗೇರಿಯಲ್ಲಿ ಕೆಲಸ ಮಾಡಲು ಸೆಕ್ಯುರಿಟಿ ಗಾರ್ಡ್ಸ್ ಬೇಕಾಗಿದ್ದಾರೆ.
ಸಂಬಳ, ESI, EPF ಸೌಲಭ್ಯವಿರುತ್ತದೆ.
ಸಂಪರ್ಕಿಸಿ
9964400600

**WANTED**
Male
Office Assistant
Andanur Chits ®
Ram & Co circle,Davangere

**Franchise**
Bhoomika Matrimony
Business opportunities
Start A Business Today
Call : 77603 16576
90080 55813
www.bhoomikamatrimony.com


**Lost Of Marks Card**
I'am Deepak kumar Patil have lost my orginal 2nd year Marks card of B optometry while shifting & cleaning the house on 20.09.2020
96062 82769

## ಕಡ್ಲೆಗೊಂದಿ ಕುಮಾರಪ್ಪ ನಿಧನ



ದಾವಣಗೆರೆ ತಾಲ್ಲೂಕು ಶಿರಗಾನಹಳ್ಳಿ ಗ್ರಾಮದ ಕಡ್ಲೆಗೊಂದಿ ಬಸಪ್ಪನವರ ಮಗ ಕುಮಾರಪ್ಪ (55) ಅವರು ದಿನಾಂಕ 04.12.2020ರ ಶುಕ್ರವಾರ ಸಂಜೆ 6 ಗಂಟೆಗೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 05.12.2020ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮದಲ್ಲಿ ನೆರವೇರಲಿದೆ.

## ಚನ್ನನಾಯ್ಕ್ ನಿಧನ




ದಾವಣಗೆರೆ ತಾಲ್ಲೂಕು, ಈಚ್ಚಘಟ್ಟ ಗ್ರಾಮದ ವಾಸಿ ದಿ.ಸೋಮ್ಲನಾಯ್ಕ್ ಇವರ ಪುತ್ರ, ರೈಲ್ವೆ ಇಲಾಖೆ ನಿವೃತ್ತ ಉದ್ಯೋಗಿ ಚನ್ನನಾಯ್ಕ್ (70) ಅವರು ದಿನಾಂಕ 4.12.2020 ರಂದು ಶುಕ್ರವಾರ ಸಂಜೆ 6.20ಕ್ಕೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.12.2020 ರಂದು ಮಧ್ಯಾಹ್ನ 12.30ಕ್ಕೆ ಈಚಘಟ್ಟ ಗ್ರಾಮದಲ್ಲಿ ನೆರವೇರಲಿದೆ.

## ಶಾಮನೂರಿನ ಸುವರ್ಣಮ್ಮ ನಿಧನ




ದಾವಣಗೆರೆ ಸಿಟಿ ಶಾಮನೂರು ವಾಸಿ ಜಡಪ್ಪಯ್ಯನವರ ಮಠದ ದಿ. ಜೆ.ಎಂ. ಬಸಯ್ಯನವರ ಧರ್ಮಪತ್ನಿ ಹಾಗೂ ಹೋಟೆಲ್ ಮುರುಗೇಶ್ ಮತ್ತು ಸಹೋದರರ ತಾಯಿ ಶ್ರೀಮತಿ ಸುವರ್ಣಮ್ಮ (80) ಅವರು ದಿನಾಂಕ 4.12.2020ರ ಶುಕ್ರವಾರ ರಾತ್ರಿ 7.27ಕ್ಕೆ ನಿಧನರಾದರು. ಮೂವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.12.2020ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

## ಶ್ರೀಮತಿ ಸುಂದರಮ್ಮ ನಿಧನ



ದಾವಣಗೆರೆ ಕೆ. ಬಿ. ಬಡಾವಣೆ ವಾಸಿ, ಜ್ಯೋತಿ ಸ್ವೀಟ್ಸ್ ಮಾಲೀಕರಾದ ದಿ॥ ವೈ.ರಾಮಚಂದ್ರ ಶೆಟ್ಟಿ ಅವರ ಧರ್ಮಪತ್ನಿ ಶ್ರೀಮತಿ ಸುಂದರಮ್ಮ (87) ಅವರು ದಿ. 3-12-20ರ ಗುರುವಾರ ರಾತ್ರಿ 12.15 ಕ್ಕೆ ನಿಧನರಾದರು. 8 ಜನ ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 4-12-2020ರ ಶುಕ್ರವಾರ. ಮಧ್ಯಾಹ್ನ 1 ಗಂಟೆಗೆ ನಗರದ ಪಿ.ಬಿ.ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಿಸಲಾಯಿತು.



**10ನೇ ವರ್ಷದ ಪುಣ್ಯಸ್ಮರಣೆ**

**ಶ್ರೀ ಬಸಾಪುರದ ಪೂಜಾರ್ ಯೋಗೇಶಪ್ಪ**
ಮಲೇಬೆನ್ನೂರು.

ನೀವು ನಮ್ಮನ್ನಗಲಿ ಇಂದಿಗೆ
(05.12.2010) ಹತ್ತು ವರ್ಷಗಳಾದವು.
ಸದಾ ನಿಮ್ಮ ಸವಿ ನೆನಪಿನಲ್ಲಿರುವ....

**ಶ್ರೀಮತಿ ಚನ್ನಮ್ಮ ಯೋಗೇಶಪ್ಪ ಮತ್ತು ಮಕ್ಕಳು ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು. ಮಲೇಬೆನ್ನೂರು ಹಾಗೂ ಬಂಧು-ಮಿತ್ರರು.**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


**ಮನೆ ಮಾರಾಟ/ಲೀಸ್‌ಗೆ**
15x40 ರಲ್ಲಿ ಸಿಂಗಲ್ ಬೆಡ್ ರೂಂನ ಮಹಡಿ ಮನೆ ಬಲಮುರಿ ಗಣೇಶ ದೇವಸ್ಥಾನದ ಹತ್ತಿರ ಮಾರಾಟಕ್ಕೆ/ಲೀಸ್‌ಗೆ ಇದೆ
89717 21755

**ಮನೆ ಬಾಡಿಗೆಗೆ ಇದೆ**
ಶಿವಕುಮಾರ ಸ್ವಾಮಿ ಬಡಾವಣೆಯ, ಸೇಂಟ್‌ಜಾನ್ಸ್ ಹೈಸ್ಕೂಲ್ ಎದುರಿಗೆ ಮೊದಲನೇ ಮಹಡಿಯಲ್ಲಿ 3 ಬೆಡ್‌ರೂಂ, ಅಟ್ಯಾಚ್ಡ್ ಬಾತ್ ರೂಂ, ಬೋರ್‌ವೆಲ್ ನೀರಿನ ಹಾಗೂ ಸೋಲಾರ್ ನೀರಿನ ಸಂಪರ್ಕದೊಂದಿಗೆ ಪೂರ್ವ ದಿಕ್ಕಿನ ಮನೆ ಬಾಡಿಗೆಗೆ ಇದೆ.
94492 50565
90086 87009

**ಅಪಾರ್ಟ್‌ಮೆಂಟ್ & ಕಮರ್ಷಿಯಲ್ ಸೈಟ್, ಸೈಟ್ ಮಾರಾಟಕ್ಕೆ ಬಾಡಿಗೆಗೆ ಇವೆ**
ಸಿದ್ದವೀರಪ್ಪ ಬಡಾವಣೆ, ಆಂಜನೇಯ ಬಡಾವಣೆ, ಬನಶಂಕರಿ ಲೇಔಟ್, ವಾಜಪೇಯಿ ಲೇಔಟ್, ಜೆ. ಎಚ್ ಪಟೇಲ್ ನಗರ, ಎಸ್.ಎಸ್. ಬಡಾವಣೆ, ಮಹಾಲಕ್ಷ್ಮಿ ಲೇಔಟ್, ಕೆ.ಹೆಚ್.ಬಿ. 30x40, 30x50, 50x50, 30x44, 20x30, 40x60
94481 85946

**ಬೇಕಾಗಿದ್ದಾರೆ**
ನುರಿತ ಕೋರಲ್ ಡ್ರಾ, ಫೋಟೋ ಶಾಪ್, ಡಿಸೈನಿಂಗ್ ಹಾಗೂ ಟೈಪಿಂಗ್ ಅನುಭವ ಇರುವವರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು.
ರಾಜು ಪ್ರಿಂಟರ್ಸ್, ದಾವಣಗೆರೆ.
9964028818, 9742774340

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**Simple vaastu**
ಸಿಂಪಲ್ ವಾಸ್ತು
98444 88838

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಭೂಮಿಕಾ ಮ್ಯಾಟ್ರಿಮನಿ**
ಲಿಂಗಾಯತ ವಧು-ವರರ ಕೇಂದ್ರ,
H.O: Vidya Nagara, 1st Bus Stop, Davangere.
B.O: BIET College Road, Near Hemavati Hostel
7760316576, 9008055813

**EXCLUIVE OPPORTUNITY FOR INSURANCE ADVISORS**
Unique Benifits : Fixed Income Rs. 10,000 to 30,000 + Huge Incentive + Health Coverage + Flexible work Timing + Gratuity + PF + Foreign Trips
Location Davanagere
98864 28601

**House For Rent Long Term & Short Term Available**
with all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

# ಇಂದಿನ ರಾಜ್ಯ ಬಂದ್‌ಗೆ ಬೆಂಬಲ ಇಲ್ಲ

ದಾವಣಗೆರೆ, ಡಿ.4- ಮರಾಠ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಿದ ರಾಜ್ಯ ಸರ್ಕಾರದ ವಿರುದ್ಧ ಜಿಲ್ಲಾ ಕನ್ನಡಪರ ಸಂಘಟನೆಗಳ ಒಕ್ಕೂಟ ನಾಳೆ ದಿನಾಂಕ 5 ರ ಶನಿವಾರ ಪ್ರತಿಭಟನೆ ನಡೆಸಲಿದೆ.

ಬಸವ ಕಲ್ಯಾಣದಲ್ಲಿ ನಡೆಯಲಿರುವ ಮರುಚುನಾವಣೆಯಲ್ಲಿ 40 ಸಾವಿರ ಮರಾಠಿಗರ ಮತ ಸೆಳೆಯುವ ಉದ್ದೇಶದಿಂದ ಹಾಗೂ ಬಿಜೆಪಿ ಅಭ್ಯರ್ಥಿ ಗೆಲುವಿಗೆ ಅಲ್ಲಿರುವ ಮರಾಠಿ ಮತಗಳು ಬೀಳಲಿ ಎಂಬ ಆಸೆಯಿಂದ ರಾಜ್ಯದಲ್ಲಿ ಮರಾಠಿ ಅಭಿವೃದ್ಧಿ ನಿಗಮ ಸ್ಥಾಪಿಸಿದೆ ಎಂದು ಪ್ರತಿಭಟನಾಕಾರರು ದೂರಿದ್ದಾರೆ.

ಇದೇ ಸಂದರ್ಭದಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಕೆ.ಜಿ. ಯಲ್ಲಪ್ಪ ಅವರು ಕೂಡಲೇ ಮರಾಠ ಅಭಿವೃದ್ಧಿ ನಿಗಮ ರದ್ದುಗೊಳಿಸಿ, ಅದಕ್ಕಾಗಿ ಮೀಸಲಿಟ್ಟ 50 ಕೋಟಿ ಹಣವನ್ನು ಬಿಡುಗಡೆ ಮಾಡದಂತೆ ಒತ್ತಾಯಿಸಿದರು.

ಕನ್ನಡಪರ ಹೋರಾಟಗಾರರನ್ನು ರೋಲ್‌ಕಾಲ್ ಹೋರಾಟಗಾರರು, ವಸೂಲಿಗಾರರು ಎಂದು ಹೀಯಾಳಿಸಿರುವ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಅವರನ್ನು ಶಾಸಕ ಸ್ಥಾನದಿಂದ ಅಮಾನತ್ತುಗೊಳಿಸಬೇಕು ಎಂದು ಆಗ್ರಹಿಸಿದರು.

ನಾಳಿನ ಕರ್ನಾಟಕ ಬಂದ್‌ಗೆ ನಮ್ಮ ಒಕ್ಕೂಟದ ಬೆಂಬಲ ಇಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಕೋವಿಡ್-19 ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಬೀದಿ ಬದಿ ವ್ಯಾಪಾರಿಗಳು, ಸಣ್ಣಪುಟ್ಟ ವರ್ತಕರು, ಕೂಲಿ ಕಾರ್ಮಿಕರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಬಡ ಕೂಲಿ ಕಾರ್ಮಿಕರ ಹಿತ ಕಾಪಾಡುವ ನಿಟ್ಟಿನಲ್ಲಿ ಬಂದ್‌ಗೆ ಬೆಂಬಲ ಇಲ್ಲ ಎಂದರು.

ಪ್ರತಿಭಟನೆಯಲ್ಲಿ ಎನ್.ಹೆಚ್. ಹಾಲೇಶ್, ಅವಿನಾಶ್ (ಅಭಿ), ರಾಜು ಎಸ್, ಡಾ. ಬಿ. ವಾಸುದೇವ್, ಸುಧಾಕರ್, ಕೆ.ಎನ್. ವೆಂಕಟೇಶ್, ಐಗೂರು ಸುರೇಶ್, ಟಾರ್ಗೆಟ್ ಅಸ್ಲಾಂ, ರಾಜು ಎಸ್.ಎಂ, ಮಾಲಾ ನಾಗರಾಜ್, ದೇವೇಂದ್ರಪ್ಪ ಆರ್, ನಾಗೇಂದ್ರ ಬಂಡೀಕರ್, ಎಸ್.ಎಂ. ಸಾಧಿಕ್, ಮಂಜಾನಾಯ್ಕ, ಮಂಜು ಮಿಂಚು ಆವರಗೆರೆ, ಬಾಬುರಾವ್, ಶ್ರೀಕಾಂತ್, ಶ್ರೀನಿವಾಸ್ ಇಂಡಿ, ಶಾಂತಮ್ಮ ಜೆ. ಮಧು, ಪಿ. ಮುಕ್ತರ್‌ಖಾನ್, ಕಿರಣ್‌ರಾಜ್, ಭಾಗ್ಯದೇವಿ, ಶೃತಿ, ರಾಧ ಮತ್ತಿತರರು ಇದ್ದರು.

# ನಿಗಮ ವಿರೋಧಿಸಿ ಇಂದು ಬಂದ್‌ಗೆ ಕರೆ

**(1ನೇ ಪುಟದಿಂದ)** ಅದನ್ನು ಮಾಡಿದ್ದೇನೆ. ಇದಕ್ಕೆ ವಿರೋಧ ಸರಿಯಲ್ಲ ಎಂದು ಹೇಳಿದ್ದಾರೆ.

ಕನ್ನಡ ಪರ ಸಂಘಟನೆಗಳು ಮುಖ್ಯಮಂತ್ರಿಯವರ ಮನವಿಗೆ ಸ್ಪಂದಿ ಸದೆ ತಮ್ಮ ನಿಲುವಿಗೆ ಅಂಟಿಕೊಂಡು, ಬಂದ್ ಯಶಸ್ವಿಗೊಳಿಸಲು ಹೊರಟಿದ್ದಾರೆ.

ಕನ್ನಡಪರ ಸಂಘಟನೆಗಳ ಮನವಿ ಸ್ಪಂದಿಸಿ, ರಾಜ್ಯದ ಜನರು ಬೀದಿಗೆ ಬರುವುದು ಬೇಡ. ಸರ್ಕಾರ ಬೇಕಾದರೆ, ಖಾಲಿ ಬಸ್‌ಗಳನ್ನು ಓಡಿಸಿಕೊಳ್ಳಲಿ, ಕಚೇರಿಗಳನ್ನು ತೆರೆದು ಕುಳಿತುಕೊಳ್ಳಲಿ. ನಾವು ಮಾತ್ರ ರಸ್ತೆಗಿಳಿದು, ಕನ್ನಡ ವಿರೋಧಿ ನೀತಿಯನ್ನು ಖಂಡಿಸುತ್ತೇವೆ ಎಂದಿದ್ದಾರೆ.

ಇಡೀ ರಾಜ್ಯಾದ್ಯಂತ ನಮ್ಮ ಮನವಿಗೆ ಸ್ಪಂದನೆ ದೊರೆತಿದೆ. ಆಟೋಗಳು, ಖಾಸಗಿ ಬಸ್‌ಗಳು, ಟ್ಯಾಕ್ಸಿಗಳು ರಸ್ತೆಗಿಳಿಯುವುದಿಲ್ಲ. ವಾಣಿಜ್ಯ ಚಟುವಟಿಕೆ ಹಾಗೂ ಹೋಟೆಲ್ ಉದ್ಯಮಗಳನ್ನು ಸ್ಥಗಿತಗೊಳಿಸುವಂತೆ ಮನವಿ ಮಾಡಿದ್ದೇವೆ. ಅದಕ್ಕೆ ಸ್ಪಂದನೆ ದೊರೆಯುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಶನಿವಾರ ಬೆಳಿಗ್ಗೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಕಚೇರಿ ಹಾಗೂ ತಾಲ್ಲೂಕು ಕಚೇರಿಗಳಿಗೆ ಮುತ್ತಿಗೆ ಹಾಕಲು ಹೋರಾಟಗಾರರು ತೀರ್ಮಾನಿಸಿದ್ದಾರೆ.

ಅಷ್ಟೇ ಅಲ್ಲ ಪ್ರಮುಖ ಕೇಂದ್ರಗಳಲ್ಲಿ ಪ್ರತಿಭಟನೆ ಮತ್ತು ಮೆರವಣಿಗೆ ನಡೆಯಲಿದೆ. ವೈದ್ಯಕೀಯ ಸೇವೆ, ಔಷಧಿ ಅಂಗಡಿ, ಹಾಲು ಇನ್ನಿತರೆ ಅಗತ್ಯ ಸೇವೆಗಳಲ್ಲಿ ಯಾವುದೇ ತೊಂದರೆ ಕೊಡುವುದಿಲ್ಲ ಎಂದು ಸಂಘಟನೆಗಳು ತಿಳಿಸಿವೆ.

ಮರಾಠಿಗರು ಕನ್ನಡ ವಿರೋಧಿ ಹೇಳಿಕೆ ನೀಡಿ, ಎಂಇಎಸ್ ಶಾಸಕರು ಕನ್ನಡಿಗರಿಗೆ ಮಸಿ ಬಳಿಯುವ ಕೆಲಸ ಮಾಡಿಕೊಂಡು ಬಂದಿದ್ದಾರೆ. ಅಂತಹವರ ಅಭಿವೃದ್ಧಿಗೆ ನಿಗಮ ಸ್ಥಾಪಿಸಲು ಹೊರಟಿರುವುದು ಸರಿಯಲ್ಲ ಎಂದು ದೂರಿದ್ದಾರೆ. ಸರ್ಕಾರದ ಈ ನಿರ್ಧಾರ ಕನ್ನಡಿಗರ ಸ್ವಾಭಿಮಾನಕ್ಕೆ ಧಕ್ಕೆ ತರುವಂತಹದ್ದು, ಈ ಬಂದ್‌ಗೆ ಸರ್ಕಾರವೇ ನೇರ ಹೊಣೆ ಎಂದು ಹೇಳಿದೆ.

ಬಂದ್ ಸಂದರ್ಭದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಮತ್ತು ಕಟ್ಟೆಚ್ಚರ ವಹಿಸಲು ಸರ್ಕಾರ ಗೃಹ ಇಲಾಖೆಗೆ ಆದೇಶಿಸಿದೆ.

## ಹರಪನಹಳ್ಳಿಯಲ್ಲಿ ಇಂದು ವಾಲ್ಮೀಕಿ ಸಮಾಜದ ಸಭೆ

ಹರಪನಹಳ್ಳಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಸಭೆಯನ್ನು ವಾಲ್ಮೀಕಿ ಸಮುದಾಯ ಭವನದಲ್ಲಿ ಇಂದು ಬೆಳಿಗ್ಗೆ 10 ಕ್ಕೆ ಕರೆಯಲಾಗಿದೆ ಎಂದು ಸಮಾಜದ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ ತಿಳಿಸಿದ್ದಾರೆ. ಸಭೆಯಲ್ಲಿ ಮುಂಬರುವ ಫೆ. 8 ಹಾಗೂ 9 ರಂದು ಹರಿಹರ ತಾಲ್ಲೂಕು ರಾಜನಹಳ್ಳಿಯಲ್ಲಿ ಜರುಗುವ ವಾಲ್ಮೀಕಿ ಜಾತ್ರೆ ಕುರಿತು ಚರ್ಚಿಸಲಾಗುವುದು ಎಂದು ಜಾತ್ರಾ ಸಮಿತಿ ಅಧ್ಯಕ್ಷ ಎಚ್.ಕೆ. ಹಾಲೇಶ್ ತಿಳಿಸಿದ್ದಾರೆ.

## ಬಂದ್‌ಗೆ ಬೆಂಬಲವಿಲ್ಲ: ಸುಕವೇ

ಇಂದಿನ ಕರ್ನಾಟಕ ಬಂದ್‌ಗೆ ಸುವರ್ಣ ಕರ್ನಾಟಕ ವೇದಿಕೆಯಿಂದ ಬೆಂಬಲವಿರುವುದಿಲ್ಲ. ಬದಲಿಗೆ ಇಂದು ಬೆಳಿಗ್ಗೆ 11 ಗಂಟೆಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥಾಪಕ ಅಧ್ಯಕ್ಷ ಆರ್. ಸಂತೋಷ ಕುಮಾರ್ ತಿಳಿಸಿದ್ದಾರೆ.

## ಕರ್ನಾಟಕ ಯುವಶಕ್ತಿ ವೇದಿಕೆಗೆ ನೇಮಕ



ದಾವಣಗೆರೆ, ಡಿ.4- ಕರ್ನಾಟಕ ಯುವಶಕ್ತಿ ವೇದಿಕೆ ಜಿಲ್ಲಾಧ್ಯಕ್ಷರಾಗಿ ವಿ.ಕೆ. ರವಿ, ಉಪಾ ಧ್ಯಕ್ಷರಾಗಿ ಶಿವುನಾಯ್ಕ್ ನೇಮಕಗೊಂಡಿದ್ದಾರೆ ಎಂದು ವೇದಿಕೆ ಸಂಸ್ಥಾಪಕ ಅಧ್ಯಕ್ಷ ಜಿ. ಮಲ್ಲೇಶ್ ತಿಳಿಸಿದ್ದಾರೆ.

## ಚುನಾವಣೆ : ಹರಿಹರದಲ್ಲಿ ಇಂದು ಕಾಂಗ್ರೆಸ್ ಸಭೆ

ಗ್ರಾಮ ಪಂಚಾಯ್ತಿ ಚುನಾವಣೆ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸಭೆಯನ್ನು ಎಸ್‌ಎಸ್‌ಕೆ ಕಲ್ಯಾಣ ಮಂಟಪದಲ್ಲಿ ಇಂದು ಸಂಜೆ 4 ಗಂಟೆಗೆ ಶಾಸಕ ಎಸ್. ರಾಮಪ್ಪ ಅವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ.

# ಭೂತಕನ್ನಡಿ ಹಿಡಿದು ಕಾಂಗ್ರೆಸ್ ಹುಡುಕಬೇಕಿದೆ



**(1ನೇ ಪುಟದಿಂದ)** ಹಾಗೂ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಪಕ್ಷ ಬದುಕಿದೆ ಎಂದು ತೋರಿಸುವ ಪ್ರಯತ್ನ ನಡೆಸುತ್ತಿದ್ದಾರೆ ಎಂದು ಈಶ್ವರಪ್ಪ ಹೇಳಿದರು.

ಶಿರ ಹಾಗೂ ಆರ್.ಆರ್. ನಗರ ಉಪ ಚುನಾವಣೆಗಳು ಮುಂದಿನ ವಿಧಾನಸಭಾ ಚುನಾವಣೆಯ ದಿಕ್ಸೂಚಿ ಎಂದು ಶಿವಕುಮಾರ್ ಹೇಳಿದ್ದರು. ರಾಜ್ಯದ ಜನತೆ ಈಗಾಗಲೇ ದಿಕ್ಸೂಚಿ ತೋರಿಸಿದ್ದು, ಮುಂದಿನ ಬಾರಿಯೂ ಬಿಜೆಪಿ ಬೇಕು ಎಂದು ತಿಳಿಸಿದ್ದಾರೆ ಎಂದರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ, ಗ್ರಾಮೀಣ ಪ್ರದೇಶಗಳಿಗೆ ಮೂಲಭೂತ ಸೌಲಭ್ಯ ಕಲ್ಪಿಸಲು ಗ್ರಾಮ ಪಂಚಾಯ್ತಿ ಚುನಾವಣೆಗಳಲ್ಲಿ ಗೆಲ್ಲಬೇಕಿದೆ.

ಗ್ರಾಮೀಣ ಭಾಗಗಳಿಗೆ ನೀರು, ವಿದ್ಯುತ್, ರಸ್ತೆ, ಚರಂಡಿ, ಆರೋಗ್ಯ, ಕೆರೆ - ಕಟ್ಟೆಗಳ ಅಭಿವೃದ್ಧಿಯಂತಹ ಮೂಲಭೂತ ಸೌಲಭ್ಯ ಕಲ್ಪಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ ಎಂದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ, ಗ್ರಾಮ ಸ್ವರಾಜ್ಯಕ್ಕಾಗಿ ಗ್ರಾಮಗಳಲ್ಲಿ ಬಿಜೆಪಿ ಅಧಿಕಾರ ಹಿಡಿಯಬೇಕಿದೆ. ಗ್ರಾಮ ಪಂಚಾಯ್ತಿಗಳಲ್ಲಿ ಬಿಜೆಪಿ ಪೂರ್ಣ ಬಹುಮತ ಪಡೆದು ಪಂಚಾಯ್ತಿಯಿಂದ ಪಾರ್ಲಿಮೆಂಟ್‌ವರೆಗೆ ಬಿಜೆಪಿ ಇರಬೇಕಿದೆ. ಈ ಚುನಾವಣೆಗಳನ್ನು ಹಗುರವಾಗಿ ಭಾವಿಸಬಾರದು ಎಂದು ತಿಳಿಸಿದರು.

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ಕಾಂಗ್ರೆಸ್ ಹಾಗೂ ಜೆಡಿಎಸ್‌ಗಳ ಕೊಡುಗೆ ಶೂನ್ಯವಾಗಿದ್ದು, ಲೂಟಿಯೇ ಅವರ ಸಾಧನೆಯಾಗಿದೆ ಎಂದು ಹೇಳಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಶಾಸಕ ಎಸ್.ಎ. ರವೀಂದ್ರನಾಥ್, ಮಹರ್ಷಿ ವಾಲ್ಮೀಕಿ ನಿಗಮದ ಅಧ್ಯಕ್ಷರೂ ಆದ ಶಾಸಕ ಎಸ್. ವಿ. ರಾಮಚಂದ್ರ, ಲಿಡ್ಕರ್ ಅಧ್ಯಕ್ಷರೂ ಆದ ಶಾಸಕ ಪ್ರೊ. ಲಿಂಗಣ್ಣ, ಮೇಯರ್ ಬಿ.ಜಿ. ಅಜಯ್ ಕುಮಾರ್, ಉಪ ಮೇಯರ್ ಸೌಮ್ಯ ನರೇಂದ್ರ ಕುಮಾರ್, ಜಿ.ಪಂ. ಅಧ್ಯಕ್ಷೆ ದೀಪಾ ಜಗದೀಶ್, ಉಪಾಧ್ಯಕ್ಷೆ ಸಾಕಮ್ಮ ಗಂಗಾಧರನಾಯ್ಕ, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಮಾಜಿ ಶಾಸಕರುಗಳಾದ ಬಿ.ಪಿ. ಹರೀಶ್, ಬಸವರಾಜನಾಯ್ಕ, ಪಕ್ಷದ ರಾಜ್ಯ ಸದಸ್ಯರಾದ ಸುಧಾ ಜಯರುದ್ರೇಶ್, ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ಮುಖಂಡರುಗಳಾದ ಎಂ.ಬಿ. ನಂದೀಶ್, ತುಳಸಿ ಮುನಿರಾಜ ಗೌಡ, ಮತ್ತಿತರರು ಉಪಸ್ಥಿತರಿದ್ದರು.

ಸಹನಾ ಪ್ರಾರ್ಥಿಸಿದರು. ಬಿ.ಎಸ್. ಜಗದೀಶ್ ನಿರೂಪಿಸಿದರು.

## ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಗೋವಧೆ, ಲವ್ ಜಿಹಾದ್ ಸೇರಿಸಲಿ : ಈಶ್ವರಪ್ಪ ಸವಾಲು

**ಲವ್ ಜಿಹಾದ್ ಹಾಗೂ ಗೋಹತ್ಯೆ ತಡೆಯಲು ಬಿಜೆಪಿ ಕಾನೂನುಗಳನ್ನು ಜಾರಿಗೆ ತರಲಿದೆ. ಇದನ್ನು ವಿರೋಧಿಸುತ್ತಿರುವ ಕಾಂಗ್ರೆಸ್, ತನ್ನ ಗ್ರಾಮ ಪಂಚಾಯ್ತಿ ಚುನಾವಣೆಯ ಪ್ರಣಾಳಿಕೆಯಲ್ಲಿ ಗೋವಧೆ ಹಾಗೂ ಯಾರು ಯಾರನ್ನು ಬೇಕಾದರೂ ಮದುವೆಯಾಗಬಹುದು ಎಂಬ ಅಂಶಗಳನ್ನು ಸೇರಿಸಲಿ ಎಂದು ಬಿಜೆಪಿ ನಾಯಕ ಹಾಗೂ ಸಚಿವ ಕೆ.ಎಸ್. ಈಶ್ವರಪ್ಪ ಸವಾಲೆಸೆದಿದ್ದಾರೆ.**

**ಗೋಹತ್ಯೆ ವಿರೋಧಿಸುವ ಬಿಜೆಪಿ ಹಾಗೂ ಆರ್‌ಎಸ್‌ಎಸ್ ಕಚೇರಿಗಳ ಎದುರು ಮುದಿ ಎತ್ತುಗಳನ್ನು ಇಡುವಂತೆ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ. ಅವರ ತಾಯಿಗೆ ವಯಸ್ಸಾದರೆ ಅವರನ್ನೂ ಹೀಗೇ ತಂದು ಬಿಡುತ್ತಾರಾ? ನಾವು ಗೋವುಗಳನ್ನು ತಾಯಿ ಎಂದು ಭಾವಿಸಿದ್ದೇವೆ ಎಂದು ಈಶ್ವರಪ್ಪ ಹೇಳಿದರು.**

## ಸಿದ್ದರಾಮಯ್ಯ 'ಕ್ರಾಸ್‌ಬ್ರೀಡ್'ಗೆ ತರಾಟೆ

ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರು ಏನು ಹೇಳುತ್ತಿದ್ದಾರೋ ಅವರಿಗೇ ಅರ್ಥವಾಗಲ್ಲ. ಅಂತರ್ಜಾತೀಯ ವಿವಾಹ ಆಗುವವರನ್ನು ಅವರು ಕ್ರಾಸ್‌ಬೀಡ್ ಎಂದು ಕರೆದಿದ್ದಾರೆ. ಆದರೆ, ನಾಯಿಗಳಿಗೆ ನಾವು ಕ್ರಾಸ್‌ಬೀಡ್ ಎಂಬ ಪದ ಬಳಸುತ್ತೇವೆ ಎಂದು ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದ್ದಾರೆ.

ಸಿದ್ದರಾಮಯ್ಯ ಹೇಳುವ ಪದವನ್ನೇ ಬಳಸುವುದಾದರೆ ಫಿರೋಜ್ ಗಾಂಧಿಯವರನ್ನು ಮದುವೆಯಾದ ಇಂದಿರಾ ಗಾಂಧಿ ಏನಾಗುತ್ತಾರೆ? ರಾಜೀವ್ ಗಾಂಧಿ ಮದುವೆಯಾದ ಸೋನಿಯಾ ಗಾಂಧಿ ಏನಾಗುತ್ತಾರೆ? ರಾಬರ್ಟ್ ವಾದ್ರಾರನ್ನು ಮದುವೆಯಾದ ಪ್ರಿಯಾಂಕಾ ಗಾಂಧಿ? ಏನಾಗುತ್ತಾರೆ ಎಂದು ಈಶ್ವರಪ್ಪ ಪ್ರಶ್ನಿಸಿದ್ದಾರೆ.

## ರೈತರ ಕ್ಷಮೆ ಕೇಳಲು ಕೃಷಿ ಸಚಿವರಿಗೆ ಬಸವರಾಜು ಶಿವಗಂಗಾ ಆಗ್ರಹ



ದಾವಣಗೆರೆ, ಡಿ.4- ಆತ್ಮಹತ್ಯೆ ಮಾಡಿಕೊಳ್ಳುವ ರೈತರು ಹೇಡಿಗಳು ಎಂದು ಹೇಳಿಕೆ ನೀಡಿರುವ ಕೃಷಿ ಸಚಿವ ಬಿ.ಸಿ.ಪಾಟೀಲ್ ಅವರು ರೈತರ ಕ್ಷಮೆ ಕೇಳಬೇಕೆಂದು ಜಿಲ್ಲಾ ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಬಸವರಾಜು ವಿ.ಶಿವಗಂಗಾ ಒತ್ತಾಯಿಸಿದ್ದಾರೆ.

ಕೃಷಿ ಸಚಿವರು ಇಂತಹ ಹೇಳಿಕೆ ನೀಡಿ, ಅನ್ನದಾತರಿಗೆ ಅಗೌರವ ಸೂಚಿಸಿದ್ದಾರೆ ಎಂದರು. ಎಲ್ಲ ರೈತರು ಕಷ್ಟಪಟ್ಟು ಬೆವರಿಳಿಸಿ, ದುಡಿಯುತ್ತಾರೆ. ಯಾರೂ ಸಹ ಶ್ರಮ ವಹಿಸದೇ ಬೆಳೆ ಬೆಳೆಯಲು ಆಗುವುದಿಲ್ಲ. ಸಾಲಬಾಧೆ, ಬೆಂಬಲ ಬೆಲೆ ಸಿಗದೇ ಬೆಳೆ ನಷ್ಟ ಮತ್ತು ಸರ್ಕಾರ ರೈತರ ಬಗ್ಗೆ ಕಾಳಜಿ ಇಲ್ಲದ ಕಾರಣ ಅನ್ನದಾತರು ಮನನೊಂದು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ ಎಂದರು.

ಸರ್ಕಾರ ರೈತರ ಬೆಳೆಗಳಿಗೆ ವೈಜ್ಞಾನಿಕವಾದ ಬೆಲೆ ನೀಡಿದರೆ ಅವರು ಆತ್ಮಹತ್ಯೆ ಮಾಡಿಕೊಳ್ಳಲ್ಲ. ಫಸಲಿಗೆ ಸೂಕ್ತ ಬೆಲೆ ಸಿಕ್ಕರೆ ಸರ್ಕಾರಕ್ಕೆ ರೈತರೇ ಸಾಲ ನೀಡುತ್ತಾರೆ. ದೇಶಕ್ಕೆ ಅನ್ನ ಕೊಡುವ ರೈತರ ಬಗ್ಗೆ ಕೃಷಿ ಸಚಿವ ಪಾಟೀಲ್ ಇಂತಹ ಹೇಳಿಕೆ ನೀಡಿ ಅಗೌರವ ಸೂಚಿಸಬಾರದೆಂದು ಬಸವರಾಜು ತಿಳಿಸಿದರು. ರೈತರ ಆತ್ಮಹತ್ಯೆ ಬಗ್ಗೆ ಕೃಷಿ ಸಚಿವರು ಮೊದಲು ತಿಳಿದುಕೊಳ್ಳಬೇಕು. ರೈತರಿಗೆ ಆತ್ಮಸ್ಥೈರ್ಯ ತುಂಬಬೇಕು. ಆದರೆ, ರೈತರನ್ನು ಹೇಡಿಗಳು ಎಂದು ಕರೆಯುವುದು ನಿಮ್ಮ ಸ್ಥಾನಕ್ಕೆ ಯೋಗ್ಯವಲ್ಲ ಎಂದರು.

## ಬಂದ್‌ಗೆ ಕ್ಷತ್ರಿಯ ಒಕ್ಕೂಟದ ಬೆಂಬಲವಿಲ್ಲ



ದಾವಣಗೆರೆ, ಡಿ.4- ರಾಜ್ಯದಲ್ಲಿ ಮರಾಠ ಅಭಿವೃದ್ಧಿ ನಿಗಮ ಮಾಡಿರುವುದಕ್ಕೆ ಪರ, ವಿರೋಧ ಕೇಳಿ ಬರುತ್ತಿದೆ. ನಮ್ಮ ರಾಜ್ಯದಲ್ಲಿ ಹುಟ್ಟಿ ಬೆಳೆದ ಮರಾಠಿಗರೂ ಸಹ ಕನ್ನಡಿಗರೇ ಆಗಿರುತ್ತಾರೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ರಾಜ್ಯದ ಸಮಗ್ರ ಅಭಿವೃದ್ಧಿ ಹಿನ್ನೆಲೆಯಲ್ಲಿ ಮರಾಠಿಗರ ಅನುಕೂಲಕ್ಕೆ ಅಭಿವೃದ್ಧಿ ನಿಗಮ ಮಾಡಿದ್ದಾರೆ. ಕೆಲವರು ಇದೇ ವಿಷಯ ಮುಂದಿಟ್ಟುಕೊಂಡು ಸಾಮರಸ್ಯ ಕದಡಲು ಮುಂದಾಗುತ್ತಿರುವುದು ವಿಷಾದನೀಯ ಸಂಗತಿ. ರಾಜ್ಯ ಬಂದ್‌ಗೆ ಕರೆ ನೀಡಿರುವುದರಿಂದ ಇದಕ್ಕೆ ಮರಾಠ ಕ್ಷತ್ರಿಯ ಒಕ್ಕೂಟ ಬೆಂಬಲ ಸೂಚಿಸುವುದಿಲ್ಲ ಎಂದು ಒಕ್ಕೂಟದ ರಾಜ್ಯ ಉಪಾಧ್ಯಕ್ಷ ಬಾಡದ ಆನಂದರಾಜ್ ತಿಳಿಸಿದ್ದಾರೆ.

ಮರಾಠರೂ ಸಹ ದೇಶದ ರಕ್ಷಣೆಗೆ ಹೋರಾಟ ಮಾಡಿದ್ದಾರೆ. ಸಾಕಷ್ಟು ಮಂದಿ ಹುತಾತ್ಮರಾಗಿದ್ದಾರೆ. ಇಲ್ಲಿ ಜಾತಿ, ಧರ್ಮ ಎಂಬ ಹೆಸರಿನಲ್ಲಿ ವಿಷಬೀಜ ಬಿತ್ತುವುದು ಸರಿಯಲ್ಲ ಎಂದರು.

ನಮ್ಮ ಜಿಲ್ಲೆಯ ಚನ್ನಗಿರಿ ತಾಲ್ಲೂಕಲ್ಲೇ ಷಹಾಜಿ ಅವರ ಸಮಾಧಿ ಇದೆ. ಹುಟ್ಟಿದ್ದು, ಮರಾಠಿ ನಾಡಲ್ಲಾದರೂ ಅವರು ವೀರ ಮರಣ ಹೊಂದಿದ್ದು ಕನ್ನಡ ನಾಡು. ಅದರಲ್ಲೂ ದಾವಣಗೆರೆ ಜಿಲ್ಲೆಯಲ್ಲಿ. ಸಮಾಜದಲ್ಲಿ ಎಲ್ಲರೂ ಒಂದಾಗಿ ಬಾಳಬೇಕು. ಆಗ ಮಾತ್ರ ದೇಶ ಅಭಿವೃದ್ಧಿಯಾಗುತ್ತದೆ. ಈ ನಡುವೆ ಬಂದ್ ಕರೆ ನೀಡಿರುವುದಕ್ಕೆ ವಿರೋಧವಿದೆ ಎಂದು ಆನಂದರಾಜ್ ತಿಳಿಸಿದ್ದಾರೆ.

## ಇಂದಿನ ಬಂದ್‌ಗೆ ವಿವಿಧ ಸಂಘಟನೆಗಳ ಬೆಂಬಲ

ಮರಾಠಾ ಪ್ರಾಧಿಕಾರ ವಿರೋಧಿಸಿ ಕನ್ನಡಪರ ಸಂಘಟನೆಗಳು ಕರೆದಿರುವ ಇಂದಿನ ಕರ್ನಾಟಕ ಬಂದ್ ಅನ್ನು ಬೆಂಬಲಿಸುವುದಾಗಿ ರೈತ ಸಂಘದ ರವೀಂದ್ರಗೌಡ ಪಾಟೀಲ ತಿಳಿಸಿದ್ದಾರೆ. ಕನ್ನಡ ರಕ್ಷಣಾ ವೇದಿಕೆ, ಮೇಲುಸೇತುವೆ ಹೋರಾಟ ಸಮಿತಿ, ರೈತ ಸಂಘಗಳು, ವರ್ತಕರು, ಆಟೋ ಸಂಘಗಳು, ಕಾರ್ಮಿಕರು, ದಿನಗೂಲಿ ಕಾರ್ಮಿಕರು ಎಲ್ಲರೂ ಒಟ್ಟಾಗಿ ಪೋಸ್ಟ್ ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಿ, ತಹಶೀಲ್ದಾರರಿಗೆ ಮನವಿ ಸಲ್ಲಿಸುವುದಾಗಿ ರವೀಂದ್ರಗೌಡ ತಿಳಿಸಿದ್ದಾರೆ.


ರಿ.ನಂ.:596/2010-11

**ಜಂಗಮ ಸೌಹಾರ್ದ ಸಹಕಾರಿ ನಿಯಮಿತ**

16ನೇ ಕ್ರಾಸ್, ಕೆ.ಟಿ.ಜೆ. ನಗರ, ಹದಡಿ ರಸ್ತೆ, ದಾವಣಗೆರೆ. ಫೋ. : 08192-233666

**2019-20ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯ ನೋಟೀಸು**

ಜಂಗಮ ಸೌಹಾರ್ದ ಸಹಕಾರಿ ನಿಯಮಿತ, ದಾವಣಗೆರೆ ಇದರ **2019-20ನೇ ಸಾಲಿನ 10ನೇ ಸರ್ವ ಸದಸ್ಯರ ಸಭೆಯನ್ನು** ಕೋವಿಡ್-19 ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಆದೇಶದಂತೆ **ವರ್ಚ್ಯುವಲ್ ಮೀಟಿಂಗ್ ಮುಖಾಂತರ ಸರ್ವಸದಸ್ಯರ ಸಭೆಯನ್ನು ದಿನಾಂಕ 08.12.2020ರಂದು ಮಂಗಳವಾರ ಬೆಳಿಗ್ಗೆ 10 ಗಂಟೆಗೆ ನಡೆಸಲು ನಿರ್ಣಯಿಸಲಾಗಿದೆ.**

ಈ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸಲು ಇಚ್ಛಿಸುವ ಸಹಕಾರಿಯ ಸದಸ್ಯರು ತಮ್ಮ ಸದಸ್ಯತ್ವ ಸಂಖ್ಯೆ, ಮೊಬೈಲ್ ಸಂಖ್ಯೆ ಮತ್ತು ವಿಳಾಸವನ್ನು ನೋಂದಾಯಿಸುವ ಅವಶ್ಯಕತೆ ಇದ್ದು, ದಿನಾಂಕ 07.12.2020ರ ಸೋಮವಾರ ಮಧ್ಯಾಹ್ನ 3.30 ರೊಳಗಾಗಿ ತಾವು ಸಹಕಾರಿಗೆ ಸಂಪರ್ಕಿಸಿ ತಪ್ಪದೇ ತಮ್ಮ ಹೆಸರು ನೋಂದಾಯಿಸಿಕೊಳ್ಳಲು ಕೋರಿದೆ. ಖುದ್ದು ಸಹಕಾರಿಗೆ ಭೇಟಿ ನೀಡಲು ಸಾಧ್ಯವಾಗದಿದ್ದಲ್ಲಿ ನಮ್ಮ ಇ-ಮೇಲ್ jangamasouharda2010@gmail.com ಗೆ ಮಾಹಿತಿ ಕಳುಹಿಸುವುದು.

ಸಹಿ/- **ಶ್ರೀಮತಿ ಕವಿತಾ ಜೆ.** ಮುಖ್ಯ ಕಾರ್ಯನಿರ್ವಾಹಕರು



**ದಾವಣಗೆರೆ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿ ನಿ., ದಾವಣಗೆರೆ.**

**02ನೇ ವಾರ್ಷಿಕ ಮಹಾಸಭೆಯ ನೋಟಿಸ್**

ದಾವಣಗೆರೆ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರಿಯ 2ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ : 20.12.2020ನೇ ಭಾನುವಾರದಂದು ಕರ್ನಾಟಕ ಸರ್ಕಾರದ ಆದೇಶದಂತೆ ವಿಡಿಯೋ ಕಾನ್ಫರೆನ್ಸ್/ವರ್ಚ್ಯೂವಲ್ ಮೀಟಿಂಗ್ ತಂತ್ರಜ್ಞಾನವನ್ನು ಬಳಸಿಕೊಂಡು ಬೆಳಿಗ್ಗೆ 12.00 ಘಂಟೆಗೆ ಕರೆಯಲಾಗಿದೆ. ಈ ಸಭೆಯಲ್ಲಿ ಸಹಕಾರಿಯ ಸದಸ್ಯರು ತಮ್ಮ ಸ್ಥಳದಿಂದಲೇ ಕಂಪ್ಯೂಟರ್ ಅಥವಾ ಮೊಬೈಲ್ ಆ್ಯಪ್ ಮೂಲಕ ಸಭೆಗೆ ಹಾಜರಿರಲು ಕೋರಿದೆ.

ಸಭೆಯ ನೋಟಿಸನ್ನು ಅಜೆಂಡಾ ಮತ್ತು ವಿವರವಾದ ಟಿಪ್ಪಣಿಗಳೊಂದಿಗೆ ಎಲ್ಲಾ ಅರ್ಹ ಸದಸ್ಯರಿಗೆ ಸಾಮಾನ್ಯ ಅಂಚೆ ಮೂಲಕ ಕಳುಹಿಸಲಾಗಿದೆ.

ನೋಟೀಸು ತಲುಪದ ಅರ್ಹ ಸದಸ್ಯರು ಈ ಪ್ರಕಟಣೆಯನ್ನೇ ವಾರ್ಷಿಕ ಮಹಾ ಸಭೆಯ ನೋಟಿಸು ಎಂದು ಪರಿಗಣಿಸಿ ಸಭೆಯಲ್ಲಿ ಹಾಜರಿರಲು ಕೋರಿದೆ.

ದಿನಾಂಕ :
ಸ್ಥಳ : ದಾವಣಗೆರೆ.

ಸಹಿ/-
ರಜತ .ವಿ, ವ್ಯವಸ್ಥಾಪಕರು



**ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**

ನಂ. 75, ತುಳಸಿ ಕಾಂಪ್ಲೆಕ್ಸ್, 1ನೇ ಮಹಡಿ, ವಸಂತ ರಸ್ತೆ, ದಾವಣಗೆರೆ.

ರಿ.ನಂ. : ಎಆರ್, 31, ಆರ್.ಜಿ.ಎನ್. 23240 / 97-98 ತಾ|| 1-7-1997

**ಮಾನ್ಯ ಸದಸ್ಯರುಗಳ ಗಮನಕ್ಕೆ**

ಕೋವಿಡ್ -19 ವೈರಸ್ ಮಹಾಮಾರಿ ತೀವ್ರಗತಿಯಲ್ಲಿ ಹರಡುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮಾರ್ಗಸೂಚಿಯನ್ವಯ ಹೆಚ್ಚಿಗೆ ಜನ ಒಂದೇ ಕಡೆ ಗುಂಪಾಗಿ ಸೇರುವಂತಿಲ್ಲದ ಪ್ರಯುಕ್ತ ಸೊಸೈಟಿಯ **2019-20ನೇಸಾಲಿನ 23ನೇ ವಾರ್ಷಿಕ ಮಹಾಸಭೆ**ಯನ್ನು **ದಿನಾಂಕ : 13-12-2020ರ ಭಾನುವಾರದಂದು** ಬೆಳಗ್ಗೆ 11.30 ಗಂಟೆಗೆ ವಿಶ್ವಕರ್ಮ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ತುಳಸಿ ಕಾಂಪ್ಲೆಕ್ಸ್, ವಸಂತ ರಸ್ತೆ, ದಾವಣಗೆರೆ. ಇಲ್ಲಿ ನಡೆಸಲು ಆಡಳಿತ ಮಂಡಳಿಯ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಕಾರಣ ಮಾನ್ಯ ಸದಸ್ಯರುಗಳು ಸಭೆಯಲ್ಲಿ ಭಾಗವಹಿಸಬೇಕೆಂದು ತಮ್ಮಲ್ಲಿ ಕೋರಲಾಗಿದೆ.

ಮಾನ್ಯ ಸದಸ್ಯರುಗಳು ಯಾವುದೇ ವಿಷಯದ ಬಗ್ಗೆ ತಾವು ನೀಡಲುದ್ದೇಶಿಸುವ ಸಲಹೆ ಸೂಚನೆ ಮಾರ್ಗದರ್ಶನಗಳನ್ನು ಸಭೆ ನಡೆಯುವ ಮೂರು ದಿನಗಳ ಮುಂಚಿತವಾಗಿ ಲಿಖಿತ ಮೂಲಕ ಸೊಸೈಟಿಯ ವ್ಯವಸ್ಥಾಪಕರಿಗೆ ಸಲ್ಲಿಸಬೇಕು.

**ವಿಶೇಷ ಸೂಚನೆ :** ಸದಸ್ಯರುಗಳು ಕೋವಿಡ್-19 ಇರುವುದರಿಂದ ಮಾಸ್ಕ್ ಧರಿಸಬೇಕು ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕೆಂದು ವಿನಂತಿ.

'ಆಡಳಿತ ಮಂಡಳಿಯ ಪರವಾಗಿ'

**ಬಿ. ವಿ. ಶಿವಾನಂದ್** ಅಧ್ಯಕ್ಷರು | **ಆರ್. ವಿಜಯಕುಮಾರ್** ಉಪಾಧ್ಯಕ್ಷರು | **ಸಿ.ಆರ್. ಬಡಿಗೇರ್** ಕಾರ್ಯದರ್ಶಿ



**ಶ್ರೀ ಸುಪಾರ್ಶ್ವನಾಥ ಜೈನ್ ಮೈನಾರಿಟಿ ಸೌಹಾರ್ದ ಸಹಕಾರಿ ನಿ., (ರಿ.)**

# 491/1, 49/2ಎ, ವಸಂತ ರೋಡ್, ದಾವಣಗೆರೆ-577 001. ದೂರವಾಣಿ : 08192-234534

**Shri Suparshwanath Jain Minority Souharda Sahakari Niyamitha (R.)**

Regd.: DR/DVG/RSR/SL.NO/4841/2017-18 E-mail : ssjmssndvg@gmail.com

**3 ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸ್**

ಶ್ರೀ ಸುಪಾರ್ಶ್ವನಾಥ ಜೈನ್ ಮೈನಾರಿಟಿ ಸೌಹಾರ್ದ ಸಹಕಾರಿ ಇದರ 3ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 24 ಡಿಸೆಂಬರ್ 2020ರ ಗುರುವಾರದಂದು ಕರ್ನಾಟಕ ಸರ್ಕಾರದ ಸ.ಇ. 43 ಸಿಎಲ್‌ಎಮ್ 2020 (ಇ) ಆದೇಶದಂತೆ ವಾರ್ಷಿಕ ಸಾಮಾನ್ಯ ಸಭೆಯನ್ನು ವಿಡಿಯೋ ಕಾನ್ಫರೆನ್ಸ್/ ವರ್ಚ್ಯುವಲ್ ಮೀಟಿಂಗ್ ಮೂಲಕ ಝೂಮ್ ವಿಡಿಯೋ ವೆಬಿನಾರ್ ತಂತ್ರಜ್ಞಾನವನ್ನು ಬಳಸಿಕೊಂಡು ದಾವಣಗೆರೆಯನ್ನು ಕೇಂದ್ರವಾಗಿಟ್ಟುಕೊಂಡು, 03:30 ಗಂಟೆಗೆ ಕರೆಯಲಾಗಿದೆ. ಈ ಸಭೆಯಲ್ಲಿ ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿ ಇರುವ ಸ್ಥಳಗಳಿಂದಲೇ ಕಂಪ್ಯೂಟರ್/ಲ್ಯಾಪ್‌ಟ್ಯಾಪ್‌ಗಳ ಮೂಲಕ ಹಾಜರಿರಲು ಕೋರಿದೆ. ಸಭೆಯ ನೋಟೀಸನ್ನು ಅಜೆಂಡಾ ಮತ್ತು ವಿವರವಾದ ಟಿಪ್ಪಣಿಗಳೊಂದಿಗೆ ಎಲ್ಲಾ ಅರ್ಹ ಸದಸ್ಯರಿಗೆ ಸಾಮಾನ್ಯ ಅಂಚೆ ಮೂಲಕ ಕಳುಹಿಸಲಾಗಿದೆ. ಸಭೆಯ ಅಜೆಂಡಾ, ಟಿಪ್ಪಣಿಗಳು ಮತ್ತು ಅರ್ಹ ಸದಸ್ಯರ ಪಟ್ಟಿಯು ಸಹಕಾರಿಯ ಕಛೇರಿಯ ಸೂಚನಾ ಫಲಕದಲ್ಲಿ ಲಭ್ಯವಿದೆ.

ಈ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಅರ್ಹ ಸೌಹಾರ್ದ ಸದಸ್ಯರು, ಡೆಲಿಗೇಟುಗಳು ತಮ್ಮ ಹೆಸರು, ಇ-ಮೇಲ್ ಐಡಿ, ವಾಟ್ಸಾಪ್ ಮೊಬೈಲ್ ಸಂಖ್ಯೆಯನ್ನು ದಿನಾಂಕ 19-12-2020ರ ಒಳಗಾಗಿ ಸೌಹಾರ್ದ ಸಹಕಾರಿಗೆ ತಲುಪುವಂತೆ ಕಳುಹಿಸಲು ಕೋರಿದೆ. ನೋಟೀಸು ತಲುಪದ ಅರ್ಹ ಸದಸ್ಯರು ಈ ಪ್ರಕಟಣೆಯನ್ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು ಎಂದು ಪರಿಗಣಿಸಿ ಸಭೆಯಲ್ಲಿ ಹಾಜರಿರಲು ಕೋರಿದೆ.

ಸ್ಥಳ : ದಾವಣಗೆರೆ
ದಿನಾಂಕ : 04-12-2020

ಸಹಿ/- ಸಂಘವಿ ಮಹಾವೀರ್ ಜೈನ್, ಅಧ್ಯಕ್ಷರು | ಸಹಿ/- ರವಿಶಂಕರ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ



**ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,**

ಪ್ರಧಾನ ಕಚೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ.ರಸ್ತೆ, ದಾವಣಗೆರೆ - 577002.

**ಬ್ಯಾಂಕಿನ ಷೇರುದಾರರ ಗಮನಕ್ಕೆ**

ಮಾನ್ಯ ಸದಸ್ಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಕೋವಿಡ್-19 ಸಾಂಕ್ರಾಮಿಕ ರೋಗದ ಪ್ರಯುಕ್ತ ಸಹಕಾರ ಬ್ಯಾಂಕುಗಳ ವಾರ್ಷಿಕ ಸಾಮಾನ್ಯ ಸಭೆಯನ್ನು ವಿಡಿಯೋ ಕಾನ್ಫರೆನ್ಸ್/ವರ್ಚ್ಯುವಲ್ ಮೀಟಿಂಗ್ ಮುಖಾಂತರ ಜರುಗಿಸುವಂತೆ ಸರ್ಕಾರವು ಮಾರ್ಗಸೂಚಿಯನ್ನು ನೀಡಿರುತ್ತದೆ. ಈ ಮಾರ್ಗಸೂಚಿಯನ್ವಯ **ಬ್ಯಾಂಕಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 12.12.2020ರ ಶನಿವಾರದಂದು ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆಸಲು ತೀರ್ಮಾನಿಸಲಾಗಿದೆ.** ಆದ್ದರಿಂದ ಮಾನ್ಯ ಸದಸ್ಯರು ವಾರ್ಷಿಕ ಮಹಾಸಭೆಯ ವರ್ಚ್ಯುವಲ್ ಮೀಟಿಂಗ್‌ನಲ್ಲಿ ವಿಡಿಯೋ ಕಾನ್ಫರೆನ್ಸ್/ವೆಬ್‌ಕಾಸ್ಟ್ ಮೂಲಕ ಪಾಲ್ಗೊಳ್ಳುವುದು ಸಾಮಾನ್ಯ ಸಭೆಯ ಹಾಜರಾತಿಯೆಂದು ಪರಿಗಣಿಸಲ್ಪಡುವುದರಿಂದ **ತಮ್ಮ ಷೇರು ಖಾತೆ ನಂಬರ್ ಹಾಗೂ ಮೊಬೈಲ್ ಸಂಖ್ಯೆಯನ್ನು ಕೂಡಲೇ ನಮ್ಮ ಬ್ಯಾಂಕಿನ ಶಾಖೆಗಳಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು ಅಥವಾ ಸದಸ್ಯರುಗಳು ತಮ್ಮ ಸದಸ್ಯತ್ವ ಸಂಖ್ಯೆ, ಹೆಸರು ಹಾಗೂ ಮೊಬೈಲ್ ನಂಬರನ್ನು ಬ್ಯಾಂಕಿನ ಈ ಮೊಬೈಲ್ ನಂ. 98800 18279 ಗೆ ಎಸ್.ಎಂ.ಎಸ್./ವಾಟ್ಸಾಪ್ ಮೂಲಕವೂ ಕೂಡ ನೋಂದಾಯಿಸಿಕೊಳ್ಳಲು ಅವಕಾಶವಿರುತ್ತದೆ.**

Scan - Get Link

ಮಾನ್ಯ ಸದಸ್ಯರು ತಮ್ಮ ಹಾಜರಾತಿಗಾಗಿ ಈ ಕೆಳಗೆ ಕೊಟ್ಟಿರುವ ಲಿಂಕ್‌ನ್ನು ಬಳಸಿಕೊಳ್ಳಲು ಕೋರಿದೆ.

**https://seeall.live/ducb**

**ಕೋಗುಂಡಿ ಬಕ್ಕೇಶಪ್ಪ** ಅಧ್ಯಕ್ಷರು | **ಅಂದನೂರು ಮುಪ್ಪಣ್ಣ** ಉಪಾಧ್ಯಕ್ಷರು | **ಡಿ.ವಿ. ಆರಾಧ್ಯಮಠ್** ಪ್ರಧಾನ ವ್ಯವಸ್ಥಾಪಕರು

## ನಾನು ರಾಜ್ಯದ ನಿಯತ್ತಿನ ನಾಯಿ



ದಾವಣಗೆರೆ, ಡಿ. 4 - ದೇಶ, ರಾಜ್ಯ, ನನ್ನ ಮತಕ್ಷೇತ್ರ, ಭಾರತಾಂಬೆ ಹಾಗೂ ಭುವನೇಶ್ವರಿಗಾಗಿ ನಾನು ನಿಯತ್ತಿನ ನಾಯಿ ಎಂದು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹೇಳಿದ್ದಾರೆ.

ನಗರದಲ್ಲಿ ಇಂದು ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಕನ್ನಡ ಹೋರಾಟಗಾರ ವಾಟಾಳ್ ನಾಗರಾಜ್ ಅವರು ನನ್ನನ್ನು ನಾಯಿ ಎಂದು ಕರೆದಿದ್ದಾರೆ. ನಾನು ನಾಯಿ, ನಿಯತ್ತಿನ ನಾಯಿ. ದೇಶ, ರಾಜ್ಯ ಹಾಗೂ ನ್ಯಾಮತಿ - ಹೊನ್ನಾಳಿ ಮತಕ್ಷೇತ್ರಗಳಲ್ಲಿರುವ ನನ್ನ ಮಾಲೀಕರಿಗೆ ನಿಯತ್ತಿನ ನಾಯಿ ಎಂದು ತಿಳಿಸಿದ್ದಾರೆ.

ನಾಯಿಗೆ ಇರುವ ನಿಯತ್ತು ವಾಟಾಳ್ ನಾಗರಾಜ್ ಅವರಿಗಿಲ್ಲ. ಅವರು ಬ್ಲಾಕ್‌ಮೇಲ್ ಮಾಡುವ ವ್ಯಕ್ತಿ. ಅವರು ಶಾಸಕರಾಗಿದ್ದಾಗ ಚಿಕ್ಕಪೇಟೆಯ ವರ್ತಕರು ಕಣ್ಣೀರು ಹಾಕಿದ್ದಾರೆ. ತಾಯಿ ಭುವನೇಶ್ವರಿ ಹೆಸರು ಹೇಳಿಕೊಂಡು ಕೆಲ ಸಂಘಟನೆಗಳು ಬ್ಲಾಕ್‌ಮೇಲ್ ಮಾಡುವ ಕೆಲಸ ಮಾಡುತ್ತಿವೆ ಎಂದೂ ಅವರು ಇದೇ ಸಂದರ್ಭದಲ್ಲಿ ಹೇಳಿದರು.

ರಾಜ್ಯದಲ್ಲಿ ಮರಾಠಿ ಸಮುದಾಯದವರ ಅಭಿವೃದ್ಧಿ ನಿಗಮ ರಚನೆಯಾಗಿದೆ. ಬೇರೆ ಬೇರೆ ಜಾತಿಯವರಿಗೆ ನಿಗಮ ಇರುವಂತೆಯೇ ಮರಾಠರಿಗೂ ರಚನೆಯಾಗಿದೆ. ಇದು ಮರಾಠಿ ಭಾಷೆಯ ನಿಗಮವಲ್ಲ ಎಂದು ರೇಣುಕಾಚಾರ್ಯ ತಿಳಿಸಿದ್ದಾರೆ.

ಇವರು ಪ್ರತಿನಿತ್ಯ ನಮ್ಮೊಂದಿಗಿದ್ದಾರೆ. ಇವರಿಗೆ ಮರಾಠಿ ಭಾಷೆಯೇ ಗೊತ್ತಿಲ್ಲ. ದಾವಣಗೆರೆಯಲ್ಲಿ, ರಾಜ್ಯದಲ್ಲಿ ನೆಲೆಸಿರುವ ಇವರುವ ಕನ್ನಡವನ್ನೇ ಆರಾಧಿಸುತ್ತಿದ್ದಾರೆ. ಕನ್ನಡದಲ್ಲಿ ವ್ಯವಹಾರ ಮಾಡುತ್ತಿದ್ದಾರೆ. ಅವರ ಅಭಿವೃದ್ಧಿಗೆ, ಮೂಲಭೂತ ಸೌಲಭ್ಯ ಕಲ್ಪಿಸಲು ಸರ್ಕಾರ ನಿಗಮ ಮಾಡಿ ಅನುದಾನ ಬಿಡುಗಡೆ ಮಾಡಿದೆ ಎಂದವರು ಹೇಳಿದರು.

## ಹರಪನಹಳ್ಳಿ ನಗರಸಭೆಯಾಗಿ ಮೇಲ್ದರ್ಜೆಗೆ: ಮರು ಪ್ರಸ್ತಾವನೆ



**ತುರ್ತು ಸಾಮಾನ್ಯ ಸಭೆಯಲ್ಲಿ ಸರ್ವಾನುಮತದ ಒಪ್ಪಿಗೆ**

ಹರಪನಹಳ್ಳಿ, ಡಿ.4 - ಪುರಸಭಾ ಅಧ್ಯಕ್ಷ ಮಂಜುನಾಥ್ ಇಜಂತಕರ್ ಅಧ್ಯಕ್ಷತೆಯಲ್ಲಿ ಶಾಸಕ ಕರುಣಾಕರ ರೆಡ್ಡಿ ಸಮ್ಮುಖದಲ್ಲಿ ನಡೆದ ಮೊದಲ ತುರ್ತು ಸಾಮಾನ್ಯ ಸಭೆಯಲ್ಲಿ ಹರಪನಹಳ್ಳಿ ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸುವಂತೆ ಮರು ಪ್ರಸ್ತಾವನೆ ಸಲ್ಲಿಸಲು ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಯಿತು.

ಮುಖ್ಯಾಧಿಕಾರಿ ಬಿ.ಆರ್. ನಾಗರಾಜ್‌ನಾಯ್ಕ್ ಮಾತನಾಡಿ, 2015 ರಲ್ಲಿ ಪಟ್ಟಣದ ಪುರಸಭೆಯನ್ನು ಮೇಲ್ದರ್ಜೆಗೇರಿಸಲು ಕಳುಹಿಸಲಾಗಿದ್ದ ಪ್ರಸ್ತಾವನೆ ಕೇವಲ ಹರಪನಹಳ್ಳಿ ಪಟ್ಟಣಕ್ಕೆ ಮಾತ್ರ ಸೀಮಿತವಾಗಿತ್ತು. ಈಗ ಪಟ್ಟಣ ಸೇರಿದಂತೆ 5 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಇರುವ ದೇವರತಿಮ್ಮಲಾಪುರ, ಶೃಂಗಾರತೋಟ, ಯಲ್ಲಾಪುರ, ಗ್ರಾಮಗಳನ್ನು ಸೇರಿಸಿ ಹೊಸದಾಗಿ ಪ್ರಸ್ತಾವನೆ ಸಲ್ಲಿಸಿದರೆ ಗ್ರೇಡ್ 2 ನಗರಸಭೆಯಾಗಿ ಮಾರ್ಪಾಡಾಗುತ್ತದೆ ಎಂದು ಸಭೆಯಲ್ಲಿ ತಿಳಿಸಿದಾಗ ಶಾಸಕ ಜಿ. ಕರುಣಾಕರರೆಡ್ಡಿ ಅವರು ಸರ್ವೆ ನಡೆಸಿಯೇ ಹೊಸದಾಗಿ ಪ್ರಸ್ತಾವನೆ ಸಲ್ಲಿಸಿ ಎಂದು ಸೂಚಿಸಿದರು.

ಸದಸ್ಯರುಗಳಾದ ಎಂ.ವಿ. ಅಂಜಿನಪ್ಪ, ಡಿ.ಅಬ್ದುಲ್ ರಹಿಮಾನ್ ಮುಂತಾದವರು ಮಾತನಾಡಿ, ಈಗಾಗಲೇ 60 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇದ್ದು ಶಾಸಕರು ನಗರಸಭೆಯನ್ನಾಗಿಸುವಲ್ಲಿ ಶ್ರಮಿಸಬೇಕು ಎಂದರು.

ಸದಸ್ಯ ಹೆಚ್.ಎಂ. ಅಶೋಕ್ ಮಾತನಾಡಿ, ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿ ಸುಮಾರು ವರ್ಷಗಳಿಂದ ನಡೆಯುತ್ತಿದ್ದರೂ ಪೂರ್ಣಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸದಸ್ಯ ಜಾಕೀರ್‌ಹುಸೇನ್ ಸರ್ಖಾವಸ್ ಮಾತನಾಡಿ ಪಟ್ಟಣಕ್ಕೆ ಗರ್ಭಗುಡಿಯಿಂದ ಸರಬರಾಜು ಆಗುತ್ತಿರುವ ನದಿ ನೀರು ತುಂಬಾ ಸೋರಿಕೆಯಾಗುತ್ತಲಿದ್ದು, ಸಮರ್ಪಕ ನೀರು ಪೂರೈಕೆಗೆ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಎಂ.ವಿ. ಅಂಜಿನಪ್ಪ ಮಾತನಾಡಿ, ನೂತನ ಕಟ್ಟಡ ನಿರ್ಮಾಣ ಮಾಡಲು ಸೂಕ್ತ ಸ್ಥಳ ಸಿಗುವವರೆಗೂ ಪುರಸಭೆಯನ್ನು ಹಳೆ ತಾಲ್ಲೂಕು ಕಛೇರಿಗೆ ತಾತ್ಕಾಲಿಕವಾಗಿ ಸ್ಥಳಾಂತರ ಮಾಡಿಸಿದರೆ ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತ ಪಡಿಸಿದಾಗ ಸದಸ್ಯ ಡಿ.ಅಬ್ದುಲ್ ರಹಿಮಾನ್ ಸಾಬ್ ಸಹ ಹಳೆಯ ತಾಲ್ಲೂಕು ಕಛೇರಿ ಕಟ್ಟಡವನ್ನು ಪುರಸಭೆಗೆ ಹಸ್ತಾಂತರ ಮಾಡಿಸಬೇಕು ಎಂದು ಹೇಳಿದರು. ಸದಸ್ಯರ ಮಾತಿಗೆ ಸ್ಪಂದಿಸಿದ ಶಾಸಕರು ಸಂಬಂಧಿಸಿದ ಅಧಿಕಾರಿಗಳ ಜೊತೆ ಮಾತನಾಡುವುದಾಗಿ ತಿಳಿಸಿದರು.

ನಾಮ ನಿರ್ದೇಶಿತ ಸದಸ್ಯ ಕೆ. ರಾಘವೇಂದ್ರ ಶ್ರೇಷ್ಠಿ, ಎಂ.ವಿ. ಅಂಜಿನಪ್ಪ, ಅಬ್ದುಲ್‌ರಹಿಮಾನ್, ಜಾಕೀರ್ ಹುಸೇನ್ ಸರ್ಖಾವಸ್ ಪುರಸಭೆಯಲ್ಲಿ ಎನ್‌ಓಸಿ, ಡೋರ್ ನಂಬರ್ ನೀಡುವುದು ಸೇರಿದಂತೆ ಇತರೆ ಕೆಲಸ ಕಾರ್ಯಗಳಿಗೆ ಜನರನ್ನು ತಿಂಗಳುಗಟ್ಟಲೆ ಅಲೆದಾಡಿಸುತ್ತಲಿದ್ದು, ಕಂದಾಯ ವಿಭಾಗದಲ್ಲಿ ಸಮಸ್ಯೆ ಇದೆ ಎಂದು ಅಸಮಾಧಾನ ವ್ಯಕ್ತ ಪಡಿಸಿ ನಿಗದಿತ ಸಮಯದೊಳಗೆ ನೀಡುವಂತೆ ಒತ್ತಾಯಿಸಿದರು.

ಸಭೆ ನಂತರ ಶಾಸಕರು ಮುಕ್ತಿ ವಾಹನಕ್ಕೆ ಚಾಲನೆ ನೀಡಿದರು. ಉಪಾಧ್ಯಕ್ಷೆ ನಿಟ್ಟೂರು ಭೀಮವ್ವ, ಸದಸ್ಯರುಗಳಾದ ಟಿ. ವೆಂಕಟೇಶ, ಡಿ. ರೊಕ್ಕಪ್ಪ. ಗೊಂಗಡಿ ನಾಗರಾಜ, ಗಣೇಶ, ಎಚ್. ಕೊಟ್ರೇಶ, ಹಿರಿಯ ಆರೋಗ್ಯ ನಿರೀಕ್ಷಕ ಪಿ.ಮಂಜುನಾಥ್, ಕಂದಾಯ ಅಧಿಕಾರಿ ಸವಿತಾ ಇನ್ನಿತರರಿದ್ದರು.

## ಜಿಲ್ಲೆ, ಜನಾಂಗ ಪ್ರಾತಿನಿಧ್ಯ ಇಲ್ಲ : ಸಚಿವ ಈಶ್ವರಪ್ಪ ಇಂಗಿತ

ದಾವಣಗೆರೆ, ಡಿ. 4 – ರಾಜ್ಯದಲ್ಲಿ ಬಿಜೆಪಿಗೆ ಪೂರ್ಣ ಬಹುಮತ ದೊರೆತಿಲ್ಲ. ಕಾಂಗ್ರೆಸ್ - ಜೆಡಿಎಸ್ ಮೈತ್ರಿ ಸರ್ಕಾರದಿಂದ ಬೇಸತ್ತು ಬಿಜೆಪಿಗೆ ಬಂದವರಿಂದ ಬಿಜೆಪಿ ಸರ್ಕಾರ ರಚನೆಯಾಗಿದೆ. ಇವರಲ್ಲಿ ಬೆಂಗಳೂರಿನವರೇ ಹೆಚ್ಚಾಗಿರುವುದರಿಂದ, ಈ ಬಾರಿ ಸಂಪುಟದಲ್ಲಿ ಜಿಲ್ಲೆ ಹಾಗೂ ಜನಾಂಗ ಪ್ರಾತಿನಿಧ್ಯ ಸಾಧ್ಯವಾಗದು ಎಂದು ಬಿಜೆಪಿ ನಾಯಕ ಹಾಗೂ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದ್ದಾರೆ.

ಜಿಲ್ಲೆಯವರೊಬ್ಬರನ್ನು ಸಚಿವರನ್ನಾಗಿ ಮಾಡುವ ಕುರಿತು ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಿದ್ದ ಅವರು, ದಾವಣಗೆರೆಯವರು ಸಚಿವರಾಗಬೇಕು ಎಂಬ ಬಯಕೆ ನನಗೂ ಇದೆ. ಆದರೆ, ಬಿಜೆಪಿಗೆ ಸ್ವತಂತ್ರವಾಗಿ ಅಧಿಕಾರ ಸಿಕ್ಕಿದ್ದರೆ ಅದು ಆಗುತ್ತಿತ್ತು. ಈಗ ಜನಾಂಗ ಹಾಗೂ ಜಿಲ್ಲೆಗಳಿಗೆ ಪ್ರಾತಿನಿಧ್ಯ ಕೊಡುವ ಪರಿಸ್ಥಿತಿ ಇಲ್ಲ ಎಂದು ತಿಳಿಸಿದರು.

## ಮರಾಠ ಸಮಾಜದ ಅಭಿವೃದ್ಧಿಗಾಗಿ ಸಿಎಂ ಬಿಎಸ್‌ವೈ ರಿಂದ ಅಭಿವೃದ್ಧಿ ನಿಗಮ ಸ್ಥಾಪನೆ

### ಇಂದಿನ ಬಂದ್ ಕರೆ ಕೈ ಬಿಡುವಂತೆ ಜಯಪ್ರಕಾಶ್ ಅಂಬರ್‌ಕರ್ ಮನವಿ




ದಾವಣಗೆರೆ, ಡಿ 03 - ರಾಜ್ಯ ಸರ್ಕಾರ ಮರಾಠ ಅಭಿವೃದ್ಧಿ ನಿಗಮ ಜಾರಿಗೆ ತಂದಿರುವುದು ನೂರಾರು ವರ್ಷಗಳಿಂದ ಕರ್ನಾಟಕದಲ್ಲಿರುವ ಮರಾಠ ಸಮುದಾಯಕ್ಕೇ ಹೊರತು, ಮಹಾರಾಷ್ಟ್ರದ ಜನರಿಗಲ್ಲ. ಹಿನ್ನೆಲೆಯಲ್ಲಿ ನಾಳೆ ದಿನಾಂಕ 5 ರಂದು ಶನಿವಾರ ಕರೆ ನೀಡಲಾಗಿರುವ ಬಂದ್ ಹಿಂಪಡೆಯುವಂತೆ ಭಾವಸಾರ ಕ್ಷತ್ರಿಯ ಸಮಾಜದ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಕೈಗಾರಿಕೋದ್ಯಮಿ ಜಯಪ್ರಕಾಶ್ ಯು. ಅಂಬರ್‌ಕರ್ ಅವರು ಪ್ರತಿಭಟನಾಕಾರರನ್ನು ಕೇಳಿಕೊಂಡಿದ್ದಾರೆ.

ನೂರಾರು ವರ್ಷಗಳಿಂದ ಕರ್ನಾಟಕದಲ್ಲಿ ನೆಲೆಸಿರುವ ನಾವು ಹುಟ್ಟಿರುವುದು, ಬದುಕು ನಡೆಸುತ್ತಿರುವುದು ಮತ್ತು ಕೊನೆಯಲ್ಲಿ ಮರಣ ಹೊಂದುವುದು ಕೂಡ ಇಲ್ಲಿಯೇ. ಕನ್ನಡ ನಮ್ಮ ಮಾತೃ ಭಾಷೆಯಾಗಿದೆ. ಬೆಳಗಾವಿ, ಚಿಕ್ಕೋಡಿ, ನಿಪ್ಪಾಣಿ ಇವೆಲ್ಲವೂ ಕರ್ನಾಟಕದ ಅವಿಭಾಜ್ಯ ಅಂಗಗಳಾಗಿದ್ದು, ಮರಾಠ ಅಭಿವೃದ್ಧಿ ನಿಗಮ ಮಾಡಿರುವುದು ನಮ್ಮ ಸಮುದಾಯದ ಅಭಿವೃದ್ಧಿಗೆ. ಇದರಿಂದ ಕನ್ನಡಿಗರಿಗೆ ಯಾವುದೇ ತೊಂದರೆಯೂ ಆಗುವುದಿಲ್ಲ. ಹಾಗಾಗಿ ಇದಕ್ಕೆ ಎಲ್ಲರೂ ಸಹಕಾರ ನೀಡುವಂತೆ ಅವರು ಮನವಿ ಮಾಡಿದ್ದಾರೆ.

ರಾಜ್ಯದಲ್ಲಿರುವ ಮರಾಠ ಸಮಾಜದ ಜನತೆಗಾಗಿ ದೂರದೃಷ್ಟಿಯೊಂದಿಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮರಾಠ ಅಭಿವೃದ್ಧಿ ನಿಗಮವನ್ನು ಸ್ಥಾಪನೆ ಮಾಡಿದ್ದಾರೆ ಹೊರತು ಮರಾಠ ಭಾಷೆ ಅಭಿವೃದ್ಧಿಗಾಗಿ ಅಲ್ಲ ಎಂದು ಜಯಪ್ರಕಾಶ್ ಸ್ಪಷ್ಟಪಡಿಸಿದ್ದಾರೆ.

ಕರ್ನಾಟಕದಲ್ಲಿ ಭಾವಸಾರ ಕ್ಷತ್ರಿಯ ಸಮಾಜ 20 ಲಕ್ಷ ಜನಸಂಖ್ಯೆ ಹೊಂದಿದ್ದು , ಟೈಲರಿಂಗ್ ವೃತ್ತಿ ನಡೆಸುವ ನಾವುಗಳು ಆ ಮೂಲಕ ನಿಮ್ಮ ಸೇವೆ ಮಾಡುತ್ತಿದ್ದೇವೆ. ಕನ್ನಡಿಗರ ಸಹಕಾರವಿಲ್ಲದೇ ನಾವು ಇಷ್ಟು ವರ್ಷಗಳ ಕಾಲ ಕರ್ನಾಟಕದಲ್ಲಿ ಶಾಂತಿಯುತವಾಗಿ ಬದುಕಲು ಸಾಧ್ಯವಾಗುತ್ತಿರಲಿಲ್ಲ. ಇನ್ನುಮುಂದೆಯೂ ಇದೇ ರೀತಿ ನಿಮ್ಮೊಂದಿಗೆ ನೆಲೆಸಲು ಅವಕಾಶ ಕೊಟ್ಟು, ಈಗ ಮರಾಠ ಅಭಿವೃದ್ಧಿ ನಿಗಮ ವಿರೋಧಿಸಿ ಕರೆ ನೀಡಲಾಗಿರುವ ಬಂದ್ ವಾಪಸ್ ಪಡೆಯಿರಿ ಎಂದು ವಿನಂತಿಸಿದ್ದಾರೆ.

## ಕಾಗಿನೆಲೆ ಶ್ರೀ ನೇತೃತ್ವದಲ್ಲಿ ಜ.15ಕ್ಕೆ ಬೆಂಗಳೂರಿಗೆ ಬೃಹತ್ ಪಾದಯಾತ್ರೆ



ದಾವಣಗೆರೆ, ಡಿ.4- ಕುರುಬ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಒತ್ತಾಯಿಸಿ ಕಾಗಿನೆಲೆ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ನೇತೃತ್ವದಲ್ಲಿ ಬರುವ ಜನವರಿ 15 ರಿಂದ ಫೆಬ್ರುವರಿ 7ರವರೆಗೆ ಕಾಗಿನೆಲೆಯಿಂದ ಬೆಂಗಳೂರಿಗೆ ಬೃಹತ್ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ.

ಪಾದಯಾತ್ರೆ ಸಂಬಂಧ ಚರ್ಚಿಸಲು ನಾಳೆ ದಿನಾಂಕ 5 ರ ಶನಿವಾರ ಬೆಳಿಗ್ಗೆ 10.30ಕ್ಕೆ ಇಲ್ಲಿನ ದೇವರಾಜ ಅರಸು ಬಡಾವಣೆಯ ಬೀರೇಶ್ವರ ಭವನದಲ್ಲಿ ಪೂರ್ವಭಾವಿ ಸಭೆ ಆಯೋಜಿಸಲಾಗಿದೆ.

ಶ್ರೀ ನಿರಂಜನಾನಂದಪುರಿ ಸ್ವಾಮೀಜಿ, ಶ್ರೀ ಈಶ್ವರಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ವಿರೂಪಾಕ್ಷಪ್ಪ ವೈ. ಕುಂಬಳೂರು ಪತ್ರಿಕಾಗೋಷ್ಠಿಯಲ್ಲಿ ಮನವಿ ಮಾಡಿದರು.

ಸಂಘದ ಬಿ.ಎಂ. ಸತೀಶ್ ಮಾತನಾಡಿದರು. ಪತ್ರಿಕಾ ಗೋಷ್ಠಿಯಲ್ಲಿ ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಮುಖಂಡರಾದ ಹದಡಿ ಲಿಂಗಪ್ಪ, ಸುನಂದಮ್ಮ ಪರಶುರಾಮಪ್ಪ, ಸಿದ್ದಪ್ಪ, ಎಚ್.ಜಿ. ಸಂಗಪ್ಪ, ಎಸ್.ಎಸ್. ಗಿರೀಶ್, ಎಸ್. ಎಸ್. ಪ್ರಕಾಶ್ ಇದ್ದರು.

## ಇಂದು ಅಂಬೇಡ್ಕರ್ ಜ್ಯೋತಿಯಾತ್ರೆ

ಡಾ. ಬಿ.ಆರ್.ಅಂಬೇಡ್ಕರ್ ಅವರ 64ನೇ ಮಹಾ ಪರಿನಿರ್ವಾಣ ಪ್ರಯುಕ್ತ ಅಸ್ಪೃಶ್ಯತಾ ನಿವಾರಣೆಗಾಗಿ ಅಂಬೇಡ್ಕರ್ ಜ್ಯೋತಿಯಾತ್ರೆ, ಸ್ವಚ್ಛತಾ ಮತ್ತು ಪ್ಲಾಸ್ಟಿಕ್ ಅರಿವು ಕಾರ್ಯಕ್ರಮವನ್ನು ಇಂದು ಸಂಜೆ 5.30ಕ್ಕೆ ಡಾ. ಅಂಬೇಡ್ಕರ್ ವೃತ್ತದಲ್ಲಿ ಹಮ್ಮಿಕೊಂಡಿದ್ದು, ದಾವಣಗೆರೆಗೆ ಅಂಬೇಡ್ಕರ್ ಜ್ಯೋತಿಯಾತ್ರೆ ಆಗಮಿಸಲಿದೆ. ನಂತರ ಬೀಳ್ಕೊಡುಗೆ ಇರುತ್ತದೆ.

ನಂತರ ಇಲ್ಲಿಂದ ಹುಬ್ಬಳ್ಳಿ, ಬೆಳಗಾಂ, ಮುಂಬೈನಲ್ಲಿನ ದಾದರ್ ಶಿವಾಜಿ ಪಾರ್ಕ್, ಚೈತನ್ಯ ಭೂಮಿಗೆ ಅಂಬೇಡ್ಕರ್ ಜ್ಯೋತಿ ತಲುಪುತ್ತದೆ. ಅಂಬೇಡ್ಕರ್ ಸರ್ಕಲ್‌ನಲ್ಲಿ ಕಂಚಿನ ಪ್ರತಿಮೆ ಸ್ಥಾಪನೆ, ಆಶ್ರಯ ಮನೆ/ ನಿವೇಶನ ನೀಡುವಂತೆ ಒತ್ತಾಯಿಸಲಾಗುವುದು ಎಂದು ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಸಿ. ಬಸವರಾಜ್ ತಿಳಿಸಿದ್ದಾರೆ.

## ಮಹಾರಾಷ್ಟ್ರ ಪರಿಷತ್ ಚುನಾವಣೆಯಲ್ಲಿ ಬಿಜೆಪಿಗೆ ಮುಖಭಂಗ

ಮುಂಬೈ, ಡಿ. 4 – ಮಹಾರಾಷ್ಟ್ರದ ವಿಧಾನ ಪರಿಷತ್‌ನ ಐದು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿಗೆ ಮುಖಭಂಗ ಎದುರಾಗಿದ್ದು, ಕೇವಲ ಒಂದು ಸ್ಥಾನದಲ್ಲಿ ಗೆಲುವು ಸಾಧಿಸಿದೆ. ಬಿಜೆಪಿ ನೆಲೆಯಾಗಿದ್ದ ನಾಗಪುರ ಪದವೀಧರ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಸೋಲು ಕಂಡಿದ್ದಾರೆ.

ಶಿಕ್ಷಕರ ಹಾಗೂ ಪದವೀಧರ ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ ಆಡಳಿತಾರೂಢ ಮಹಾ ವಿಕಾಸ್ ಅಘಾಡಿ ನಾಲ್ಕು ಸ್ಥಾನ ಪಡೆದುಕೊಂಡಿದೆ. ಇದು ಆಡಳಿತಾರೂಢ ಮೈತ್ರಿಕೂಟವನ್ನು ಮತ್ತಷ್ಟು ಬಲಪಡಿಸಲಿದೆ.

## ಬಡ್ಡಿ ದರ ಯಥಾಸ್ಥಿತಿ : ಆರ್.ಬಿ.ಐ.

ಮುಂಬೈ, ಡಿ. 4 – ಹಣದುಬ್ಬರದ ಹಿನ್ನೆಲೆಯಲ್ಲಿ ಬಡ್ಡಿ ದರಗಳನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಂಡಿರುವ ರಿಸರ್ವ್ ಬ್ಯಾಂಕ್, ಆರ್ಥಿಕತೆ ಪ್ರಸಕ್ತ ಚತುರ್ಥದಲ್ಲಿ ಬೆಳವಣಿಗೆ ಹಂತಕ್ಕೆ ಬರಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದೆ.

ಆರು ಸದಸ್ಯರ ಹಣಕಾಸು ನೀತಿ ಸಮಿತಿಯು ರೆಪೋ ದರವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳಲು ನಿರ್ಧರಿಸಿದೆ. ಜನವರಿ ನಂತರ 115 ಅಂಕಗಳಷ್ಟು ಬಡ್ಡಿ ದರ ಇಳಿಸಿದ್ದ ರಿಸರ್ವ್ ಬ್ಯಾಂಕ್, ಆಗಸ್ಟ್‌ನಲ್ಲಿ ಹಣದುಬ್ಬರದ ಕಾರಣದಿಂದಾಗಿ ಬಡ್ಡಿ ದರ ಇಳಿಕೆ ತಡೆದಿದೆ.

## ರಸ್ತೆ ಅಪಘಾತ : ಕುಂಬಳೂರಿನ ಮೂವರ ಸಾವು



ರಾಣೇಬೆನ್ನೂರು, ಡಿ.4- ಇಲ್ಲಿಗೆ ಸಮೀಪದ ರಾಷ್ಟ್ರೀಯ ಹೆದ್ದಾರಿ 4 ರ ಕಮದೋಡು ಬಳಿ ಇಂದು ಸಂಜೆ 4ರ ಸಮಯದಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಹರಿಹರ ತಾಲ್ಲೂಕು ಕುಂಬಳೂರಿನ ಒಂದೇ ಕುಟುಂಬದ ಮೂವರು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ.

ಹರಿಹರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಕೋಶಾಧ್ಯಕ್ಷರೂ ಆದ ಮಲೇಬೆನ್ನೂರು ಲಯನ್ಸ್ ಕ್ಲಬ್ ಅಧ್ಯಕ್ಷ ಕೆ. ಎನ್.ಹನುಮಂತಪ್ಪ, ಅವರ ಪುತ್ರಿ ರಾಜೇಶ್ವರಿ (32), ಮೊಮ್ಮಗಳು ಶಿವಾನಿ (10) ಅಪಘಾತದಲ್ಲಿ ಮೃತಪಟ್ಟಿರುವ ನತದೃಷ್ಟರು.

ಹನುಮಂತಪ್ಪ ಅವರು ತಮ್ಮ ಕಾರಿನಲ್ಲಿ ಹುಬ್ಬಳ್ಳಿಯಲ್ಲಿದ್ದ ಸಂಬಂಧಿಕರ ಮದುವೆಗೆ ತೆರಳಿ ವಾಪಾಸ್ ಕುಂಬಳೂರಿಗೆ ಆಗಮಿಸುವ ಸಂದರ್ಭದಲ್ಲಿ, ಅವರಿದ್ದ ಕಾರು ಮತ್ತು ಕಂಟೈನರ್ ಲಾರಿ ನಡುವೆ ಡಿಕ್ಕಿಯಾದ ಪರಿಣಾಮ ಈ ದುರಂತ ನಡೆದಿದೆ ಎಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ.

ರಸ್ತೆ ಅಪಘಾತದಿಂದಾಗಿ ಕೆಎ 17 ಪಿ 3157 ಸಂಖ್ಯೆಯ ಕಾರು ನಜ್ಜುಗುಜ್ಜಾಗಿದೆ. ಹನುಮಂತಪ್ಪ ಸ್ವತಃ ಕಾರು ಚಲಾಯಿಸುತ್ತಿದ್ದರು. ಮೃತರ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು ನಾಳೆ ಶನಿವಾರ ಕುಂಬಳೂರಿನಲ್ಲಿ ನೆರವೇರಿಸಲಾಗುವುದು ಎಂದು ಅವರ ಕುಟುಂಬ ವರ್ಗದವರು ತಿಳಿಸಿದ್ದಾರೆ.

ಹಾವೇರಿ ಎಸ್ಪಿ ದೇವರಾಜ್, ರಾಣೇಬೆನ್ನೂರು ಗ್ರಾಮಾಂತರ ಸಿಪಿಐ ಭಾಗ್ಯದೇವಿ, ಹಲಗೇರಿ ಪಿಎಸ್‌ಐ ಮಂಜುನಾಥ್ ಅವರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

**ಸಂತಾಪ :** ಹನುಮಂತಪ್ಪ ಅವರ ನಿಧನಕ್ಕೆ ರಾಮಕೃಷ್ಣ ಆಶ್ರಮದ ಶ್ರೀ ಶಾರದೇಶಾನಂದ ಸ್ವಾಮೀಜಿ, ಯಲವಟ್ಟಿಯ ಸಿದ್ಧಾಶ್ರಮದ ಶ್ರೀ ಯೋಗಾನಂದ ಸ್ವಾಮೀಜಿ, ಜಿಲ್ಲಾ ಕಸಾಪ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ಗೌರವ ಕಾರ್ಯದರ್ಶಿಗಳಾದ ಬಿ.ದಿಳ್ಯೆಪ್ಪ, ಎನ್.ಎಸ್.ರಾಜು, ನಿಕಟಪೂರ್ವ ಅಧ್ಯಕ್ಷ ಎ.ಆರ್. ಉಜ್ಜಿನಪ್ಪ, ತಾಲ್ಲೂಕು ಕಸಾಪ ಅಧ್ಯಕ್ಷ ಓ.ಜಿ. ರುದ್ರಗೌಡ್ರು, ಎನ್.ಜಿ. ಶಿವಾಜಿ ಪಾಟೀಲ್, ಜಿಗಳಿಯ ಗೌಡ್ರ ಬಸವರಾಜ್, ಲಯನ್ಸ್ ವಿದ್ಯಾಸಂಸ್ಥೆ ಅಧ್ಯಕ್ಷ ಬಿ. ಚಿದಾನಂದಪ್ಪ, ಶಿವ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಡಾ. ಬಿ. ಚಂದ್ರಶೇಖರ್, ಹಿರಿಯ ಮುಖಂಡರಾದ ಮಾಗಾನಹಳ್ಳಿ ಹಾಲಪ್ಪ, ಕೆ. ತೀರ್ಥಪ್ಪ ಅವರು ಸಂತಾಪ ವ್ಯಕ್ತಪಡಿಸಿದ್ದಾರೆ.

## 'ಮಾಂಜ್ರಾ ರಾಕ್‌ಸ್ಟಾರ್' ಸ್ಪರ್ಧೆಗಳು

ದಾವಣಗೆರೆ, ನ.27- ನಾಡಿದ್ದು ದಿನಾಂಕ 6ರ ಭಾನುವಾರ ನಗರದ ಪದ್ಮಶ್ರೀ ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ 'ಮಾಂಜ್ರಾ ರಾಕ್‌ಸ್ಟಾರ್' ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಪರ್ಧೆ ನಡೆಯಲಿರುವುದಾಗಿ 'ಮಾಂಜ್ರಾ' ಚಿತ್ರ ನಿರ್ದೇಶಕ ಮುತ್ತುರಾಜ ರೆಡ್ಡಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಾಂಜ್ರಾ' ಚಿತ್ರವು ಜನವರಿ 15 ರಂದು ಬಿಡುಗಡೆಯಾಗಲಿದ್ದು, ಈ ಚಿತ್ರದ ಪ್ರಾಚಾರಾರ್ಥ ನಡೆಸಲಾಗುವ ಸ್ಪರ್ಧೆಯಲ್ಲಿ ನೃತ್ಯ (ಗ್ರೂಪ್, ಸೋಲೋ), ಹಾಡುಗಾರಿಕೆ (ಸೋಲೋ), ಏಕಾಭಿನಯ, ಮಿಮಿಕ್ರಿ ಒಳಗೊಂಡಿವೆ.

ಸ್ಪರ್ಧೆಯಲ್ಲಿ ಗೆದ್ದವರಿಗೆ ಪ್ರಥಮ ಬಹುಮಾನ 2 ಲಕ್ಷ ರೂ., ದ್ವಿತೀಯ 1 ಲಕ್ಷ ಹಾಗೂ ತೃತೀಯ 50 ಸಾವಿರ ರೂ. ಬಹುಮಾನವಿದೆ. ಸ್ಪರ್ಧೆಯಲ್ಲಿ ಭಾಗವಹಿಸುವವರು ಮೊ.9110495858, 98450 60626ಕ್ಕೆ ಸಂಪರ್ಕಿಸಬಹುದು.

ಪತ್ರಿಕಾಗೋಷ್ಠಿಯಲ್ಲಿ 'ಮಾಂಜ್ರಾ' ಚಿತ್ರದ ನಟ ರಂಜಿತ್ ಸಿಂಗ್, ಬಾಲ ನಟಿ ನಮನ, ಮಾರುತಿ, ಗೀತಾ ಉಪಸ್ಥಿತರಿದ್ದರು.

## ನಗರದ ವಿವಿಧೆಡೆಯಲ್ಲಿ ಇಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

ಪಿ.ಬಿ. ರಸ್ತೆ, ಸಂಗೊಳ್ಳಿ ರಾಯಣ್ಣ ಸರ್ಕಲ್, ಬಿ.ಎಸ್.ಎನ್.ಎಲ್ ಕಛೇರಿ, ಶಂಕರ್ ವಿಹಾರ್ ಬಡಾವಣೆ, ಶಾಂತಿನಗರ, ವಿನಾಯಕ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಬನಶಂಕರಿ ಬಡಾವಣೆ ಹಾಗೂ ಸುತ್ತ ಮುತ್ತ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಮಂಡಿಪೇಟೆ, ಅಶೋಕ ಟಾಕೀಸ್, ಬಿನ್ನಿ ಕಂಪನಿ ರಸ್ತೆ, ಮಹಾವೀರ ರಸ್ತೆ, ಕೆ.ಆರ್. ರಸ್ತೆ, ಗಡಿಯಾರ ಕಂಬ, ಬಿ.ಟಿ. ಗಲ್ಲಿ, ಬೆಳ್ಳೂಡಿ ಗಲ್ಲಿ, ಇಸ್ಲಾಂ ಪೇಟೆ, ಹೆರಿಗೆ ಆಸ್ಪತ್ರೆ, ಪೋಸ್ಟ್ ಆಫೀಸ್, ರೈಲ್ವೆ ಸ್ಟೇಷನ್, ವಿಜಯಲಕ್ಷ್ಮಿ ರಸ್ತೆ ಸ್ವಲ್ಪ ಭಾಗ, ವಸಂತ ಟಾಕೀಸ್ ಸ್ವಲ್ಪ ಭಾಗ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10.30 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.


**FOR RENT**

Commercial Office Space with Godowns.

**3,500 Sft.**

BEST SUITABLE FOR FMCG / MEDICAL PHARMACY STOCKIST.

Contact :

**K R GIRISH**

SAMRUDDHI, # 403/1-1, Basapura Road, Anekonda, DAVANAGERE-577002

97422 68001 / 94484 42718


## ಎನ್.ಬಿ.ಎಫ್.ಸಿ.ಗಳ ನಿಗಾ ಮತ್ತಷ್ಟು ಬಿಗಿ

ಮುಂಬೈ, ಡಿ. 4 – ಬ್ಯಾಂಕೇತರ ಹಣಕಾಸು ಸಂಸ್ಥೆಗಳ (ಎನ್.ಬಿ.ಎಫ್.ಸಿ.) ಆಡಳಿತ ಮಟ್ಟ ಸುಧಾರಣೆಗಾಗಿ ಅವುಗಳ ಮೇಲಿನ ನಿಗಾ ವ್ಯವಸ್ಥೆಯನ್ನು ರಿಸರ್ವ್ ಬ್ಯಾಂಕ್ ಮತ್ತಷ್ಟು ಬಿಗಿಗೊಳಿಸಿದೆ.

ಹಣಕಾಸು ನೀತಿ ಪರಾಮರ್ಶೆ ಸಂದರ್ಭದಲ್ಲಿ ಈ ನಿರ್ಧಾರ ತೆಗೆದುಕೊಂಡಿರುವುದನ್ನು ಪ್ರಕಟಿಸಿರುವ ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್, ಈ ಬಗ್ಗೆ ಸಾರ್ವಜನಿಕರ ಸಲಹೆಗಳನ್ನು ಕೇಳಲು 2021ರ ಜನವರಿಯಲ್ಲಿ ವಿವರಗಳನ್ನು ಪ್ರಕಟಿಸಲಾಗುವುದು ಎಂದು ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಬನಶಂಕರಿ ಬಡಾವಣೆ ಹಾಗೂ ಶನೇಶ್ವರ ಫೀಡರ್ ವ್ಯಾಪ್ತಿಯ ಪಿ.ಬಿ. ರಸ್ತೆ, ಸಂಗೊಳ್ಳಿ ರಾಯಣ್ಣ ಸರ್ಕಲ್, ಬಿ.ಎಸ್.ಎನ್.ಎಲ್ ಕಛೇರಿ, ಶಂಕರ ವಿಹಾರ ಬಡಾವಣೆ, ಶಾಂತಿನಗರ ಮತ್ತು ವಿನಾಯಕ ನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ವಿದ್ಯುತ್ ವ್ಯತ್ಯಯವಾಗಲಿದೆ.

## ಕುಂಬಳೂರು ಗ್ರಾಮದ ಕಮ್ಮಾರಗಟ್ಟಿ ಹನುಮಂತಪ್ಪ ನಿಧನ



ಹರಿಹರ ತಾ. ಕುಂಬಳೂರು ಗ್ರಾಮದ ವಾಸಿ
ದಿ. ಕಮ್ಮಾರಗಟ್ಟಿ ನಿಂಗಪ್ಪ ಮತ್ತು ದಿ. ಹಾಲಮ್ಮ ಇವರ ಪುತ್ರರಾದ
ಹಾಗೂ ಮಲೇಬೆನ್ನೂರು ಲಯನ್ಸ್ ಕ್ಲಬ್ ಅಧ್ಯಕ್ಷರೂ,
ಹರಿಹರ ತಾ. ಕನ್ನಡ ಸಾಹಿತ್ಯ ಪರಿಷತ್ ಕೋಶಾಧ್ಯಕ್ಷರೂ ಆದ

**ಶ್ರೀ ಕಮ್ಮಾರಗಟ್ಟಿ ಹನುಮಂತಪ್ಪ** (60 ವರ್ಷ)

ಇವರು, ದಿನಾಂಕ 4.12.2020 ರ ಶುಕ್ರವಾರ ಸಾಯಂಕಾಲ 5 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

**ಇವರ ಜೊತೆ ಮಗಳು**

**ರಾಜೇಶ್ವರಿ** (32 ವರ್ಷ) ಮತ್ತು

**ಮೊಮ್ಮಗಳು ಶಿವಾನಿ** (10 ವರ್ಷ) ಇವರೂ ಕೂಡಾ ನಿಧನರಾಗಿದ್ದು, ಇವರ ಅಂತ್ಯಕ್ರಿಯೆಯನ್ನು ದಿನಾಂಕ 5.12.2020 ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಕುಂಬಳೂರಿನಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು : **ಪತ್ನಿ - ಶ್ರೀಮತಿ ಗೀತಾ, ಪುತ್ರ - ಚನ್ನಬಸವಣ್ಣ ಹಾಗೂ ಸಹೋದರಿಯರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಬಂಧು-ಮಿತ್ರರು.**






JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte